بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْد

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ಸಂಚಿಕೆ: 21

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

23 ಮೇ 2024, 23 ಹಿಜ್ರತ್ 1403 ಹಿಜರಿ ಶಮ್‌ಸಿ,
14 ಝುಲ್–ಖಅ್‌ದ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

هُوَ الَّذِيْ جَعَلَ لَكُمُ الَّيْلَ
لِتَسْكُنُوْا فِيْهِ وَالنَّهَارَ مُبْصِرًا ؕ
اِنَّ فِيْ ذٰلِكَ لَاٰيٰتٍ لِّقَوْمٍ يَّسْمَعُوْنَ

**(ಸೂರಃ ಯೂನುಸ್ : 68)**

**ಅಂದರೆ: ನಿಮಗೆ ವಿಶ್ರಮಿಸಲಿಕ್ಕಾಗಿ ರಾತ್ರಿಯನ್ನೂ ನಿಮಗೆ ಪ್ರಕಾಶವನ್ನು ನೀಡಲಿಕ್ಕಾಗಿ ಹಗಲನ್ನೂ ಉಂಟುಮಾಡಿದವನು ಅವನಾಗಿದ್ದಾನೆ. ನಿಶ್ಚಯವಾಗಿಯೂ ಗಮನವಿಟ್ಟು ಕೇಳುವವರಿಗೆ ಇದರಲ್ಲಿ ದೃಷ್ಟಾಂತಗಳಿವೆ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

### ಮಾನವ ಹಕ್ಕುಗಳ ಪ್ರಾಮುಖ್ಯತೆ

**(2298)** ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್(ಸ) ರವರ ಬಳಿ ಸಾಲವನ್ನು ಹೊಂದಿರುವ ವ್ಯಕ್ತಿಯ ಅತ್ಯಕ್ರಿಯೆಯು ಬಂದಾಗ ಕೇಳುತ್ತಾರೆ. ಅವನು ತನ್ನ ಸಾಲವನ್ನು ತೀರಿಸಲು ಯಾವುದೇ ಸಂಪತ್ತನ್ನು ಬಿಟ್ಟಿದ್ದಾನೆಯೇ? ಜನರು ಹೇಳಿದರು. ಹೌದು ಎಂದಾಗ ಸ್ವಯಂ ಅವನ ನಮಾಝ್ ಜನಾಝಾ (ಅಂತ್ಯಕ್ರಿಯೆ ಪ್ರಾರ್ಥನೆ) ಮಾಡುತ್ತಿದ್ದರು. ಇಲ್ಲದಿದ್ದರೆ ಮುಸಲ್ಮಾನರಿಗೆ ಹೇಳುತ್ತಿದ್ದರು. ನೀವು ಅವನ ನಮಾಝ್ ಜನಾಝಾ (ಅಂತ್ಯಕ್ರಿಯೆಯ ಪ್ರಾರ್ಥನೆ) ಮಾಡಿರಿ ಎನ್ನುತ್ತಿದ್ದರು. ಅಲ್ಲಾಹನು ಅವರಿಗೆ ವಿಜಯವನ್ನು ನೀಡಿದಾಗ ಹೇಳಿದರು. ನಾನು ಮುಸ್ಲಿಮರಿಗೆ ಅವರ ಸಂಬಂಧಿಕರಿಗಿಂತ ಹೆಚ್ಚು ಹತ್ತಿರವಾಗಿದ್ದೇನೆ. ಆದುದರಿಂದ ಭಕ್ತರಲ್ಲಿ ಯಾರೇ ಮರಣ ಹೊಂದಿದರೂ ಸಾಲವನ್ನು ಬಿಟ್ಟರೂ ಅದನ್ನು ತೀರಿಸುವ ಜವಾಬ್ಧಾರಿ ನನ್ನದು. ಯಾರೇ ಆಗಲಿ ಸಂಪತ್ತನ್ನು ಬಿಟ್ಟರೆ ಅವರ ವಾರಸುದಾರರಿಗೆ ಸೇರುತ್ತದೆ.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯಲ್ಲಾಹ್ ಶಾಹ್ ಸಾಹಿಬ್(ರ) ಈ ಹದೀಸಿನ ವ್ಯಾಖ್ಯಾನ ಮಾಡುತ್ತಾ ಬರೆದಿದ್ದಾರೆ: ನ್ಯಾಯಶಾಸ್ತ್ರ ತಜ್ಞರು (ಫಿಖಾ) ಈ ಸಂಬಂಧ ಪ್ರಶ್ನೆಯನ್ನು ಎತ್ತಿದರು. ಸಾಲಗಾರನ ನಮಾಝ್ ಜನಾಝು (ಅಂತ್ಯಕ್ರಿಯೆಯ ಪ್ರಾರ್ಥನೆ) ಮಾಡದಿರುವುದು ನಿಷೇಧ ಅಥವಾ ತೌಜ್ಹೀರ್? ಕೇಳುವ ಉದ್ದೇಶವು ಮಾನವ ಹಕ್ಕಗುಳ ಉಲ್ಲಂಘನೆ ಆಗಭಾರದೆಂದಾಗಿದೆ. ಇದನ್ನು ಸಾಮಾನ್ಯ ವಿಷಯು ಎಂದು ಪರಿಗಣಿಸಬಾರದು. (ಉಮದತುಲ್ ಖ್ವಾರಿ ಜುಝ್ 12, ಪುಟ 126) ಆದರೆ ಸಾಲಗಾರನ ನಮಾಝ್ ಜನಾಝು ನಿರ್ವಹಿಸುವುದು ಇಷೇಧವಾಗಿದ್ದರೆ ಸಹಾಬರಿಗೆ ನಮಾಝ್ ಜನಾಝ್ ನಿರ್ವಹಿಸಲು ಹೇಳುತ್ತಿರಲಿಲ್ಲ. ಆದುದರಿಂದ ಇದರಿಂದ ಸ್ಪಷ್ಟವಾಗಿದೆ. ಇದು ನಿಷೇಧವಲ್ಲ. ತೌಜ್ಹೀರ್ ಆಗಿದೆ. **(ಸಹೀ ಬುಖಾರಿ ಸಂಪುಟ–4, ಕಿತಾಬುಲ್ ಕಿಫಾಲ, ಮುದ್ರಣ 2008 ಖಾದಿಯಾನ್)**

ನಮ್ಮ ಪ್ರವಾದಿ ಹಝ್ರತ್ ಪೈಗಂಬರ್[ಸ] ಮತ್ತು ಅವರ ಸಹಾಬಿಗಳು ಮಕ್ಕಾದಲ್ಲಿ ತೋರಿಸಿದ ತಾಳ್ಮೆಯ ಮಾದರಿಯನ್ನು ನಮ್ಮ ಸ್ನೇಹಿತರು ಪ್ರಸ್ತುತ ಕಾಲದಲ್ಲಿ ತೋರಿಸಬೇಕು.

## ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ಶೇಖ್ ರಹ್ಮತುಲ್ಲಾಹ್ ಸಾಹಿಬ್ ಅವರ ಪತ್ರವು ಒಂದು ಸಂಕಟಕ್ಕೆ ಸಂಬಂಧಿಸಿದಂತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸೇವೆಗೆ ತಲುಪಿತು, ಅದರ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು:

"ಅವರಿಗೆ ಲಭಿಸಿದ ಈ ಸಂಕಟಕ್ಕಾಗಿ ನಾನು ಅವರಿಗಾಗಿ ತುಂಬಾ ಪ್ರಾರ್ಥಿಸುತ್ತೇನೆ. ಇದರಿಂದ ನನಗೆ ತುಂಬಾ ಸಂತೋಷವಾಯಿತು. ವಾಸ್ತವವೇನೆಂದರೆ, ಸಂಕಟಗಳು ಮಹಾನ್ ಕರುಣೆಗೆ ಕಾರಣವಾಗುತ್ತದೆ, ಒಂದು ಕಡೆ, ಆರಾಧಕನು (ಮುಝ್‌ತರ್) ದುಃಖಕ್ಕೆ ಒಳಗಾಗುತ್ತಾನೆ ಮತ್ತು ಎಲ್ಲಾ ಕಡೆಯಿಂದ ಕತ್ತರಿಸಲ್ಪಟ್ಟು ಏಕೈಕ ಕಾರಣಕರ್ತನ ಕಡೆಗೆ ವಾಲುತ್ತಾನೆ ಮತ್ತು ಇನ್ನೊಂದೆಡೆಯಿಂದ ದೈವಿಕತೆಯು ತನ್ನ ಕೃಪೆಯ ಸೈನ್ಯದೊಂದಿಗೆ ಅವನನ್ನು ಸಾಂತ್ವನಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಪ್ರವಾದಿಗಳ ವಾಡಿಕೆ (ಸುನ್ನತ್) ಮತ್ತು ಅಲ್ಲಾಹನ (ವಾಡಿಕೆ) ಸುನ್ನತ್‌ನಲ್ಲಿ ನಾನು ಯಾವಾಗಲೂ ನೋಡುವುದೇನೆಂದರೆ, ಈ ಪ್ರೀತಿಯ ಸಮುದಾಯದ ಸಹಾನುಭೂತಿ ಮತ್ತು ಕರುಣೆಯು ದುಃಖದ ಸಮಯದಲ್ಲಿ ತನ್ನ ದಾಸರ ಕಡೆಗೆ ಎಷ್ಟು ಉತ್ಸಾಹದಿಂದ ಕೂಡಿರುತ್ತದೆ ಎಂದರೆ, ಅದು ವಿಶ್ರಾಂತಿ ಹಾಗೂ ಸಂರಕ್ಷಣೆಯ ಸಂದರ್ಭದಲ್ಲಿ ಆ ಪರಿಸ್ಥಿತಿಯಲ್ಲಿ ಇರುವುದಿಲ್ಲ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಝುಹರ್ ನಮಾಝ್ ಮೊದಲು ಬಹಳ ಸೂಕ್ಷ್ಮವಾದ ಭಾಷಣ ನೀಡಿದರು ಮತ್ತು ಮೌಲಾನಾ ಅಬ್ದುಲ್ ಕರೀಂ ಸಾಹಿಬ್ ಅವರನ್ನು ಉದ್ದೇಶಿಸಿ ಹೇಳಿದರು:

"ಏನೆಲ್ಲೆ ಸಂಭವಿಸುತ್ತಿದೆಯೊ ಅದು ಅಲ್ಲಾಹನ ಚಿತ್ತದಂತೆ ನಡೆಯುತ್ತಿದೆ. ವಾಗ್ದಾತ್ತ ಮಹದಿಯ ಸಮಯದಲ್ಲಿ ದೊಡ್ಡ ಗಲಾಟೆ ನಡೆಯುವುದು ಮತ್ತು ಅದನ್ನು ಪೂರ್ವಜರ ನಂಬಿಕೆಗಳ ವಿರುದ್ಧ ಮಾತನಾಡುವವನು ಎಂದು ಆತನನ್ನು 'ಕಾಫಿರ್' (ಅವಿಶ್ವಾಸಿ) ಎಂದು ಹೇಳುವರು ಎಂದು ಬರೆದಿರುವ ಲಕ್ಷಣಗಳ ಸತ್ಯಾಸತ್ಯತೆಯನ್ನು ಈ ಜನರು ತಮ್ಮ ಕೈಗಳಿಂದ ಮುಚ್ಚುವುದು ಅಗತ್ಯವಾಗಿತ್ತು. ಆದ್ದರಿಂದ ಪ್ರಸ್ತುತ ಕಾಲದಲ್ಲಿ, ನಮ್ಮ ಸ್ನೇಹಿತರು ನಮ್ಮ ಪ್ರವಾದಿ ಹಝ್ರತ್ ಪೈಗಂಬರ್(ಸ.ಅ) ಮತ್ತು ಮಕ್ಕಾದಲ್ಲಿದ್ದ ಅವರ ಸಹಾಬಗಳಂತೆ ತಾಳ್ಮೆಯಿಂದಿರಬೇಕು. ಅಲ್ಲಿನ ಅಧಿಕಾರಿಗಳಿಗೆ ತಲುಪುವಂತಹ ಯಾವುದೇ ಕೃತ್ಯ ಅವರು ಕೈಗೊಳ್ಳುತ್ತಿರಲಿಲ್ಲ. ಅಂತಹವರು ನಮಗೆ ಸಹಾಯ ಮಾಡುತ್ತಾರೆ ಎಂದು ಈ ಸಮಯದಲ್ಲಿ ಯಾರನ್ನೂ ನಂಬಬೇಡಿ. ನೆನಪಿಡಿ, ಈ ಸಮಯದಲ್ಲಿ, ಸರ್ವಶಕ್ತನಾದ ಅಲ್ಲಹನನ್ನು ಹೊರತುಪಡಿಸಿ ಯಾವುದೇ ರಕ್ಷಕ ಮತ್ತು ಬೆಂಬಲಿಗನಿಲ್ಲ.

**(ಮಲ್‌ಫೂಝಾತ್, ಸಂಪುಟ–2, ಪುಟಗಳು 4–5, ಪ್ರಕಟಿತ 2018, ಖಾದಿಯಾನ್)**

**ಪ್ರಪಂಚದಾದ್ಯಂತ ಎಲ್ಲವೂ ದೇವರನ್ನು ಒಟ್ಟಾರೆಯಾಗಿಯೂ ಮಹಿಮೆಪಡಿಸುತ್ತದೆ ಮತ್ತು ಪ್ರತ್ಯೇಕವಾಗಿಯೂ ದೇವರನ್ನು ಮಹಿಮೆಪಡಿಸುತ್ತದೆ.**
**ಪ್ರತಿಯೊಂದು ವಿಷಯದಲ್ಲಿಯೂ ದೈವ ಲಕ್ಷಣದ ಚಿತ್ರಣವೂ ಇದೆ, ದೇವರ ರಹಸ್ಯವಾಗಿಡುವ ಲಕ್ಷಣ, ಕ್ಷಮಿಸುವ ಲಕ್ಷಣ, ಅವನ ಸೃಷ್ಟಿ, ಅವನ ಆದಿಪತ್ಯ, ಇತ್ಯಾದಿ ಪ್ರತಿಯೊಂದು ವಿಷಯದಲ್ಲೂ ಎಲ್ಲಾ ಗುಣಲಕ್ಷಣಗಳು ಕಂಡುಬರುತ್ತವೆ.**

ಸಯ್ಯದ್‌ನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಸೂರ ಬನೀ ಇಸ್ರಾಈಲ್‌ನ ಆಯತ್ 45 **ಯುಸಬ್ಬಿಹು ಲಹುಸ್ಸಮಾವಾತುಸ್ಸಬ್‌ಉ ವಲ್‌ಅರ್ಝು ವಮನ್ ಫೀಹಿನ್ನ; ವಿನ್ ಮಿನ್ ಶೈಯಿನ್ ಇಲ್ಲಾ ಯುಸಬ್ಬಿಹು ಬಿಹಮ್ದಿಹೀ ವಲಾಕಿನ್ ಲಾ ತಫ್‌ಖಹೂನ ತಸ್‌ಬೀಹಹುಮ್; ಇನ್ನಹೂ ಕಾನ ಹಲೀಮನ್ ಗಫೂರ** ವನ್ನು ವ್ಯಾಖ್ಯಾನಿಸುತ್ತಾ ಹೇಳುತ್ತಾರೆ:

ಈ ಆಯತ್‌ನಲ್ಲಿ ಜಗತ್ತನ್ನು ಸಮಗ್ರ ದೃಷ್ಟಿಯಲ್ಲಿ ನೋಡಿದರೆ ಅದು ಭಗವಂತನ ಏಕತ್ವವನ್ನೂ ಸೂಚಿಸುತ್ತದೆ ಮತ್ತು ಪ್ರತಿಯೊಂದು ವಸ್ತುವನ್ನು

*(ಪುಟ ಸಂಖ್ಯೆ–12 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಯಾ ರಸೂಲಲ್ಲಾಹ್(ಸ)! ನಾವೆಲ್ಲರೂ ಸಂತೃಪ್ತರಾಗಿದ್ದೇವೆ. ಈ ಸುವಾರ್ತೆಯ ನಂತರ ಹುತಾತ್ಮರ ಕುರಿತು ಚಿಂತಿಸಿ ಯಾರು ತಾನೆ ಅಳುವರು?

ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಅಝ್‌ಹಬ್ ಹುಝ್ನು ಖುಲೂಬಿಹಿಮ್ ವಜ್‌ಬುರ್ ಮುಸೀಬತುಹುಮ್, ವ ಅಹ್ಸಿನಿಲ್ ಖಲಫ ಅಲಾ ಮನ್ ಖುಲ್ಲಿಫೂ**
ಹೇ ಅಲ್ಲಾಹ್, ಅವರ ಹೃದಯಗಳಿಂದ ದುಃಖ ಮತ್ತು ನೋವನ್ನು ಅಳಿಸು. ಅವರ ಕಷ್ಟತೆಗಳನ್ನು ದೂರೀಕರಿಸು. ಶಹೀದರ ಸಂತಾನಗಳನ್ನು ಶಹೀದರ ಅತ್ಯುತ್ತಮ ಪ್ರತಿನಿಧಿಗಳನ್ನಾಗಿ ಮಾಡು.

ನಾವು ಪ್ರಗತಿಯನ್ನು ಕಾಣಬೇಕಾದರೆ, ನಾವು ಆ ವಿಶ್ವಾಸವನ್ನು ತಮ್ಮೊಳಗೆ ಬೆಳೆಸಿಕೊಳ್ಳಬೇಕು, ನಾವು ಉತ್ಸಾಹವನ್ನು ಬೆಳೆಸಿಕೊಳ್ಳಬೇಕು ಮತ್ತು ನಾವು ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು

ಯಾ ರಸೂಲಲ್ಲಾಹ್(ಸ)! ನನ್ನ ತಾಯಿ ತಂದೆ ನಿಮಗೆ ಅರ್ಪಿತವಾಗಲಿ, ನೀವು ಸುರಕ್ಷಿತವಾಗಿರುವಾಗ, ಯಾರಾದರೂ ಸತ್ತರೆ ನನಗೇನು? ನನಗೆ ನಿಮ್ಮ ಪ್ರಾಣ ಮಾತ್ರ ಬೇಕಿತ್ತು. ನೀವು ಬದುಕಿದ್ದರೆ ಬೇರೆಯವರ ಸಾವಿನ ಚಿಂತೆ ನನಗಿಲ್ಲ.

ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು **ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್ರಸೂಲುಲ್ಲಾಹ್** ಎಂದು ಹೇಳುತ್ತಾರೋ ಅವರನ್ನು ವಧಿಸುವುದನ್ನು ಅಲ್ಲಾಹನು ನಿಷಿದ್ಧಗೊಳಿಸಿದ್ದಾನೆ.

ಪ್ರವಾದಿ ಚರಿತ್ರೆ ಉಹುದ್ ಯುದ್ಧಾನಂತರದ ಘಟನೆಗಳು, ಸಹಾಬಿಯರ ತ್ಯಾಗ ಮತ್ತು ಉಹುದಿನ ಶಹೀದರ ಅತ್ಯುನ್ನತ ಪದವಿಯ ವಿಶ್ವಾಸವರ್ಧಕ ಪ್ರಸ್ತಾಪ

ಮಧ್ಯಪ್ರಾಚ್ಯ ರಾಜ್ಯಗಳು ಮತ್ತು ಲೋಕದ ಅವಸ್ಥೆಗಳಿಗಾಗಿಯೂ ಪ್ರಾರ್ಥನೆಗಳನ್ನು ಮಾಡುತ್ತಿರಿ. ಸ್ಥಿತಿಗತಿಗಳು ಹದಗೆಡುತ್ತಾ ಹೋಗುತ್ತಿವೆ. ಇರಾನಿನ ಮೇಲೂ ದಾಳಿ ನಡೆಸುವ ಶಂಕೆಯಿದೆ. ಹಾಗಾದರೆ ಯುದ್ಧ ಇನ್ನಷ್ಟು ಹರಡುವುದು. ಅಲ್ಲಾಹನು ಕೃಪೆದೋರಲಿ. ಯಮನಿನಲ್ಲಿ ಬಹುತೇಕ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ನಿನ್ನೆ ವಾರ್ತೆ ಬಂದಿತ್ತು. ಉಳಿದಿರುವವರು ಬಿಡುಗಡೆ ಹೊಂದಲಿಕ್ಕಾಗಿಯೂ ದುಆ ಮಾಡಿರಿ.

ದಿವಂಗತ ಮುಸ್ತಫಾ ಖಾನ್ ಸಾಹಿಬ್ ಮತ್ತು ಡಾ॥ ಮೀರ್ ದಾವೂದ್ ಅಹ್ಮದ್ ಸಾಹಿಬ್ ಅಮೇರಿಕಾರವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗ್ಹಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **12-04-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ . اَلرَّحْمٰنِ الرَّحِيْمِ . مٰلِكِ يَوْمِ الدِّيْنِ .

اِيَّاكَ نَعْبُدُ وَاِيَّاكَ نَسْتَعِيْنُ . اِهْدِنَا الصِّرَاطَ الْمُسْتَقِيْمَ .

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ .

ರಮಝಾನಿಗೆ ಮುಂಚಿನ ಖುತ್ಬಗಳಲ್ಲಿ ಹಝ್ರತ್ ಪೈಗಂಬರ್(ಸ)ರ ಯುದ್ಧಗಳ ಪ್ರಸ್ತಾಪ ನಡೆಯುತ್ತಿತ್ತು. ಅದರಲ್ಲಿ ಹಝ್ರತ್ ಪೈಗಂಬರ್(ಸ)ರ ಜೀವನಚರಿತ್ರೆಯ ಪ್ರಸ್ತಾಪವೂ ಇತ್ತು. ಇಂದು ಸಹ ಈ ಸಂಬಂಧವಾಗಿ ನಾನು ಕೆಲವು ಸಂಗತಿಗಳನ್ನು ಹೇಳುವೆನು.

ವರದಿಯಲ್ಲಿ ಹೀಗೊಂದು ಪ್ರಸ್ತಾಪವಿದೆ. ಹಝ್ರತ್ ಸಅದ್ ಬಿನ್ ಮುಆಧ್(ರ)ರ ತಾಯಿ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದಾಗ ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರವರು ಕುದುರೆಯ ಮೇಲೆ ಸವಾರರಾಗಿದ್ದರು ಮತ್ತು ಹಝ್ರತ್ ಸಅದ್ ಬಿನ್ ಮುಆಧ್(ರ) ಕುದುರೆಯ ಲಗಾಮು ಹಿಡಿದಿದ್ದರು. ಹಝ್ರತ್ ಸಅದ್(ರ) ಅವರ ತಾಯಿಯನ್ನು ನೋಡಿ ಹಝ್ರತ್ ಪೈಗಂಬರ್(ಸ)ರೊಡನೆ 'ಇವರು ನನ್ನ ತಾಯಿ' ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ)ರವರು ಸಅದ್‌ರ ತಾಯಿಯನ್ನು ಬರಮಾಡಿಕೊಳ್ಳಲು ಹೇಳಿದರು. ಹಝ್ರತ್ ಪೈಗಂಬರ್(ಸ)ರವರು ಅವರಿಗಾಗಿ ತಮ್ಮ ಕುದುರೆಯನ್ನು ನಿಲ್ಲಿಸಿದರು. ಸಅದ್‌ರ ತಾಯಿ ಸಮೀಪಕ್ಕೆ ಬಂದು ಹಝ್ರತ್ ಪೈಗಂಬರ್(ಸ)ರನ್ನು ನೋಡಲಾರಂಭಿಸಿದರು. ಅವರ ಪುತ್ರನಾದ ಹಝ್ರತ್ ಅಮ್ರ್ ಬಿನ್ ಮುಆಧ್(ರ) ಹುತಾತ್ಮರಾದ ಬಗ್ಗೆ ಹಝ್ರತ್ ಪೈಗಂಬರ್(ಸ) ಸಂತಾಪ ಸೂಚಿಸಿದರು. ಆಗ ಅವರು ಹೇಳಿದರು: ನಾನು ನಿಮ್ಮನ್ನು ಕ್ಷೇಮವಾಗಿ ಕಂಡಾಗ ನನ್ನ ದುಃಖ ಮತ್ತು ವಿಪತ್ತು ಎಲ್ಲವೂ ಕೊನೆಗೊಂಡಿವೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮಗೆ ಸುವಾರ್ತೆ ಹಾಗೂ ಇತರ ಎಲ್ಲ ಶಹೀದರ ಸಂಬಂಧಕರಿಗೆ ಹೀಗೆ ಸುವಾರ್ತೆ ತಿಳಿಸು: ಈ ಎಲ್ಲ ಹುತಾತ್ಮರು ಸ್ವರ್ಗದಲ್ಲಿ ಪರಸ್ಪರ ಸ್ನೇಹಿತರು ಮತ್ತು ಅವರೆಲ್ಲರು ತಮ್ಮ ತಮ್ಮ ಮನೆಯವರಿಗಾಗಿ ಅಲ್ಲಾಹನೊಡನೆ ಶಫಾಅತ್ ಮತ್ತು ಶಿಫಾರಸ್ಸು ಮಾಡಿರುವವರು. ಅಂದರೆ ಹುತಾತ್ಮರು ತಮ್ಮ ಮನೆಯವರಿಗಾಗಿಯು ಅಲ್ಲಾಹನಲ್ಲಿ ಶಿಫಾರಸ್ಸು ಮಾಡಿದರು. ಹಝ್ರತ್ ಉಮ್ಮೆ ಸಅದ್(ರ) ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವೆಲ್ಲರೂ ಸಂತೃಪ್ತರಾಗಿದ್ದೇವೆ. ಈ ಸುವಾರ್ತೆಯ ನಂತರ ಹುತಾತ್ಮರ ಕುರಿತು ಚಿಂತಿಸಿ ಯಾರು ತಾನೆ ಅಳುವರು? ಅನಂತರ ಎಲ್ಲ ಶಹೀದ್‌ರ ಸಂಬಂಧಿಕರಿಗಾಗಿ ದುಆ ಮಾಡಲು ಉಮ್ಮೆ ಸಅದ್(ರ) ಹಝ್ರತ್ ಪೈಗಂಬರ್(ಸ)ರೊಡನೆ ಹೇಳಿದರು. ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡಿದರು: **ಅಲ್ಲಾಹುಮ್ಮ ಅಝ್‌ಹಬ್ ಹುಝ್ನು ಖುಲೂಬಿಹಿಮ್ ವಜ್‌ಬುರ್ ಮುಸೀಬತುಹುಮ್, ವ ಅಹ್ಸಿನಿಲ್ ಖಲಫ ಅಲಾ ಮನ್ ಖುಲ್ಲಿಫೂ**

ಹೇ ಅಲ್ಲಾಹ್, ಅವರ ಹೃದಯಗಳಿಂದ ದುಃಖ ಮತ್ತು ನೋವನ್ನು ಅಳಿಸು. ಅವರ ಕಷ್ಟತೆಗಳನ್ನು ದೂರೀಕರಿಸು. ಶಹೀದರ ಸಂತಾನಗಳನ್ನು ಶಹೀದರ ಅತ್ಯುತ್ತಮ ಪ್ರತಿನಿಧಿಗಳನ್ನಾಗಿ ಮಾಡು.
(ಸೀರತುಲ್ ಹಲಬೀಯಾ, ಸಂಪುಟ-2, ಪುಟ-345, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಮದೀನ ನಿವಾಸಿಗಳ ತ್ಯಾಗಶೀಲತೆಯ ಪ್ರಸ್ತಾಪ ಮಾಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ) ಉಹುದ್ ಕ್ಷೇತ್ರದಿಂದ ಹಿಂದಿರುಗಿದಾಗ, ಮದೀನಾದ ಮಹಿಳೆಯರು ಮತ್ತು ಮಕ್ಕಳು ಅವರನ್ನು ಸ್ವಾಗತಿಸಲು ನಗರದಿಂದ ಹೊರಬಂದರು. ಒಬ್ಬ ಹಳೆಯ ಮತ್ತು ಧೈರ್ಯಶಾಲಿ ಅನ್ಸಾರಿ ಸಹಾಬಿ, ಸಅದ್ ಬಿನ್ ಮುಆಧ್(ರ)ರವರು ಹಝ್ರತ್ ಪೈಗಂಬರ್(ಸ) ಅವರ ಒಂಟೆಯ ಲಗಾಮ್ ಅನ್ನು ಹಿಡಿದುಕೊಂಡು ಹೆಮ್ಮೆಯಿಂದ ಮುಂದೆ

ಸಾಗುತ್ತಿದ್ದರು. ನಗರದ ಬಳಿ ಅವರಿಗೆ ಕಣ್ಣಿಗೆ ಕಣ್ಣಿನ ಪೊರೆ ಬಿದ್ದು ಆಕೆಯ ದೃಷ್ಟಿ ದುರ್ಬಲವಾಗಿದ್ದ ತಮ್ಮ ಮುದು ವೃಯಸ್ಸಿನ ತಾಯಿ ಕಾಣಿಸಿಕೊಂಡರು. ಆಕೆ ಎಲ್ಲಾ ಮಹಿಳೆಯರ ಮುಂದೆ ನಿಂತು ಅಲ್ಲಿ ಇಲ್ಲಿ ನೋಡಲಾರಂಭಿಸಿದಳು ಮತ್ತು ಹಝ್ರತ್ ಪೈಗಂಬರ್(ಸ) ಎಲ್ಲಿದ್ದಾರೆ? ಎಂದು ಹುಡುಕಲು ಪ್ರಾರಂಭಿಸಿದಳು. ತನ್ನ ಮಗನ ಹುತಾತ್ಮನ ಸುದ್ದಿ ತಿಳಿದರೆ ನನ್ನ ತಾಯಿ ಆಘಾತಕ್ಕೊಳಗಾಗುತ್ತಾರೆ ಎಂದು ಸಅದ್ ಬಿನ್ ಮುಆಧ್ ಯೋಚಿಸಿದರು. ಆದ್ದರಿಂದ, ಅವರು ಹಝ್ರತ್ ಪೈಗಂಬರ್(ಸ) ಅವರಿಗೆ ಧೈರ್ಯ ಮತ್ತು ತಾಳ್ಮೆವಹಿಸಲು ಮಾರ್ಗದರ್ಶನ ನೀಡಬೇಕೆಂದು ಬಯಸಿದ್ದರು. ಆದ್ದರಿಂದ, ಅವರು ತನ್ನ ತಾಯಿಯನ್ನು ನೋಡಿದ ತಕ್ಷಣ, ಯಾ ರಸೂಲಲ್ಲಾಹ್(ಸ)! ನನ್ನ ತಾಯಿ! ಯಾ ರಸೂಲಲ್ಲಾಹ್(ಸ)! ನನ್ನ ತಾಯಿ! ಎಂದು ಎರಡು ಸಲ ನನನ್ ತಾಯಿ ಬರುತ್ತಿದ್ದಾಳೆ ಎಂದು ತಿಳಿಸಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ನುಡಿದರು: "ಬೀಬಿ! ಈ ಯುದ್ಧದಲ್ಲಿ ನಿಮ್ಮ ಪುತ್ರನೊಬ್ಬ ಹುತಾತ್ಮನಾಗಿರುವುದು ಬಹಳ ವಿಷಾದಕರ. ಆ ಮುದುಕಿಯ ದೃಷ್ಟಿ ದುರ್ಬಲವಾಗಿತ್ತು, ಆದ್ದರಿಂದ ಅವಳಿಗೆ ನಿಮ್ಮ ಮುಖವನ್ನು ನೋಡಲು ಸಾಧ್ಯವಾಗಲಿಲ್ಲ. ಅವಳು ಅಲ್ಲಿ ಇಲ್ಲಿ ನೋಡುತ್ತಲೇ ಇದ್ದಳು. ಅಂತಿಮವಾಗಿ, ಅವಳ ಕಣ್ಣುಗಳು ನಿಮ್ಮ ಮುಖದ ಮೇಲೆ ನೆಲೆಗೊಂಡಿತು. ಅವಳು ಹಝ್ರತ್ ಪೈಗಂಬರ್(ಸ)ರ ಹತ್ತಿರ ಬಂದು ಹೇಳಿದಳು, ಯಾ ರಸೂಲಲ್ಲಾಹ್(ಸ)! ನಾನು ನಿಮ್ಮನ್ನು ಸುರಕ್ಷಿತವಾಗಿ ನೋಡಿದಾಗ, ನಾನು ತೊಂದರೆಯನ್ನು ಹುರಿದು ತಿಂದಿದ್ದೇನೆ ಎಂದು ನೀವು ಅರ್ಥಮಾಡಿಕೊಳ್ಳಬೇಕು.

ಈಗ ನೋಡಿ! ಮುದಿ ವಯಸ್ಸಿನಲ್ಲಿ ಆಸರೆಯಾಗಿದ್ದ ಪುತ್ರನು ಮೃತಪಟ್ಟಾಗ ಆ ಮಹಿಳೆ ಅಷ್ಟೊಂದು ಧೈರ್ಯದಿಂದ ಹೇಳಿದ್ದನ್ನು ನೋಡಿರಿ. 'ನನ್ನ ಪುತ್ರನ ಮರಣದ ದುಃಖ ನನ್ನನ್ನು ಬಾಧಿಸುವುದಾದರೂ ಹೇಗೆ? ಹಝ್ರತ್ ಪೈಗಂಬರ್(ಸ) ಜೀವಂತವಾಗಿ ಇರುವರು ಎಂದಿರುವಾಗ ನಾನು ಪುತ್ರನ ಮರಣದ ದುಃಖವನ್ನು ಸುಟ್ಟು ತಿನ್ನುವೆ. ನನ್ನ ಪುತ್ರನ ಮರಣವು ನನ್ನನ್ನು ಕೊಲ್ಲಲು ಕಾರಣವಾಗುವುದಿಲ್ಲ, ಆದರೆ ಹಝ್ರತ್ ಪೈಗಂಬರ್(ಸ) ಜೀವಂತವಾಗಿದ್ದಾರೆ ಮತ್ತು ನನ್ನ ಮಗ ಅವರನ್ನು ರಕ್ಷಿಸಲು ತನ್ನ ಪ್ರಾಣವನ್ನು ನೀಡಿದ್ದಾನೆ ಎಂಬ ಆಲೋಚನೆಯು ನನ್ನ ಶಕ್ತಿಯನ್ನು ವರ್ಧಿಸುತ್ತದೆ. (ಖುರೂನೆ ಊಲಾ ಕಿ ಮುಸಲ್ಮಾನ್ ಖವಾತೀನ್, ಅನ್ವಾರುಲ್ ಉಲೂಮ್, ಸಂಪುಟ-25, ಪುಟ-441)

ಮತ್ತೊಂದು ಸಂದರ್ಭದಲ್ಲಿ ಇದೇ ಘಟನೆಯ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೀಗೆ ಪ್ರಸ್ತಾಪಿಸಿರುವರು: "ಹೇ ಅನ್ಸಾರ್, ನನ್ನ ಜೀವ ನಿಮಗೆ ಅರ್ಪಿತಗೊಳ್ಳಲಿ. ನೀವು ಎಷ್ಟೆಲ್ಲ ಪ್ರತಿಫಲವನ್ನು ಗಳಿಸಿದಿರಿ!" ಅದೇ ರೀತಿಯಲ್ಲಿ ಸಹಾಬಿ ಸ್ತ್ರೀಯರ ತ್ಯಾಗಗಳನ್ನು ಮುಂದಿರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸಂದರ್ಭದಲ್ಲಿ ಅಹ್ಮದೀ ಮಹಿಳೆಯರನ್ನು ಸಂಬೋಧಿಸುತ್ತಾ ಹೀಗೆ ಹೇಳಿದರು: ಇಸ್ಲಾಮಿನ ಪ್ರಸಾರ ಮತ್ತು ಪ್ರಚಾರದಲ್ಲಿ ಪುರುಷರ ಜೊತೆಜೊತೆಯಾಗಿದ್ದ ಮಹಿಳೆಯರು ಅವರೇ ಆಗಿದ್ದರು. ಆ ಮಹಿಳೆಯರ ಬಗ್ಗೆ ಇಸ್ಲಾಮಿಕ ಲೋಕ ಹೆಮ್ಮೆ ಪಡುತ್ತದೆ. ನೀವು ಹಝ್ರತ್ ಮಸೀಹ್ ಮೌಊದ್(ಅ)ರಲ್ಲಿ ವಿಶ್ವಾಸ ಕೈಗೊಂಡಿದ್ದೀರಿ ಎಂದು ನೀವು ಸಹ ವಾದಿಸುತ್ತೀರಿ. ಹಝ್ರತ್ ಮಸೀಹ್ ಮೌಊದ್(ಅ) ಹಝ್ರತ್ ಪೈಗಂಬರ್(ಸ)ರ ಪ್ರತಿರೂಪ ಆಗಿರುವರು. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ ನೀವು ಸಹಾಬಿ ಸ್ತ್ರೀಯರ ಪ್ರತಿರೂಪಗಳಾದ್ದೀರಿ ಎನ್ನಬಹುದು. ಆದರೆ ನೀವು ಸರಿಯಾಗಿ ಹೇಳಿರಿ, ಧಾರ್ಮಿಕ ಸೇವೆ ಮಾಡಲು ಸಹಾಬಿ ಮಹಿಳೆಯರಲ್ಲಿದ್ದ ಅದೇ ಆವೇಶ ನಿಮ್ಮೊಳಗೆ ಅಲೆಯಾಡುತ್ತಿದೆಯೇ? ನೀವು ಅದರ ಬಗ್ಗೆ ಯೋಚಿಸಿದರೆ, ನೀವು ಮಹಿಳೆ ಸಹಾಬಿಯರಿಂದ ಬಹಳ ಹಿಂದೆ ಕಾಣುತ್ತೀರಿ. ನಂತರ ಅವರು(ರ) ಹೇಳಿದರು: ಅವರು ತಮ್ಮ ಜೀವನದ ಜೊತೆ ಆಟವಾಡುವ ಮೂಲಕ ಮಾಡಿದ ತ್ಯಾಗಗಳು ಅಲ್ಲಾಹನಿಗೆ ತುಂಬಾ ಪ್ರಿಯವಾದವು, ಅಲ್ಲಾಹನು ಅವರಿಗೆ ಬಹಳ ಬೇಗ ಯಶಸ್ಸನ್ನು ದಯಪಾಲಿಸಿದನು ಮತ್ತು ಶತಮಾನಗಳಲ್ಲಿ ಇತರ ಸಮುದಾಯಗಳು ಮಾಡಲಾಗದ್ದನ್ನು ಸಹಾಬಾಗಳು ಮತ್ತು ಮಹಿಳೆ ಸಹಾಬಗಳು ಕೆಲವೇ ವರ್ಷಗಳಲ್ಲಿ ತೋರಿಸಿದರು.

(ಫರೀಝಾಯೆ ತಬ್ಲೀಗ್ ಔರ್ ಅಹ್ಮದಿ ಖವಾತೀನ್, ಅನ್ವಾರುಲ್ ಉಲೂಮ್, ಸಂಪುಟ-18, ಪುಟ-400-401)

ಆದ್ದರಿಂದ, ನಾವು ಪ್ರಗತಿಯನ್ನು ಕಾಣಬೇಕಾದರೆ, ನಾವು ಆ ವಿಶ್ವಾಸವನ್ನು ತಮ್ಮೊಳಗೆ ಬೆಳೆಸಿಕೊಳ್ಳಬೇಕು, ನಾವು ಉತ್ಸಾಹವನ್ನು ಬೆಳೆಸಿಕೊಳ್ಳಬೇಕು ಮತ್ತು ನಾವು ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಬೆಳೆಸಿಕೊಳ್ಳಬೇಕು ಆದರೆ ಈ ಘಟನೆಗಳನ್ನು ಪದೇ ಪದೇ ಮತ್ತು ವಿಭಿನ್ನ ರೀತಿಯಲ್ಲಿ ಕೇಳಿದಾಗ, ಸತ್ಯವಿಶ್ವಾಸದ ಒಂದು ವಿಸ್ಮಯಕರವಾದ ಅವಸ್ಥೆ ಮತ್ತು ಆವೇಶ ಉಂಟಾಗುತ್ತದೆ. ವಿಶೇಷವಾಗಿ ಹಝ್ರತ್ ಮುಸ್ಲಿಹ್ ಮೌಊದ್(ರ) ರವರು ವಿವರಿಸುವಾಗ, ಈ ಘಟನೆಗಳು ಕೇವಲ ಒಂದು ಘಟನೆಯಾಗಿ ಮಾತ್ರವಲ್ಲ, ವಿಶಾಲವಾದ ಸನ್ನಿವೇಶದಲ್ಲಿ ನಮ್ಮ ಮುಂದೆ ಬರುತ್ತವೆ.

ಆರಂಭಿಕ ಶತಮಾನಗಳಲ್ಲಿ ಮಹಿಳೆಯರ ಘಟನೆಗಳನ್ನು ಪ್ರಸ್ತಾಪಿಸುತ್ತಾ, ಒಂದು ಸಂದರ್ಭದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ಹೇಳಿದರು, "ಉಹದ್ ಕ್ಷೇತ್ರವು ಮದೀನಾದಿಂದ ಎಂಟರಿಂದ ಒಂಬತ್ತು ಮೈಲಿ ದೂರದಲ್ಲಿದೆ. ಹಝ್ರತ್ ಪೈಗಂಬರ್(ಸ) ಹುತಾತ್ಮರಾದ ಸುದ್ದಿ ಮದೀನಾವನ್ನು ತಲುಪಿದಾಗ, ಮಹಿಳೆಯರು ಬಹಳ ದುಃಖದಿಂದ ಅಳುತ್ತಾ ನಗರದಿಂದ ಹೊರಬಂದು ಯುದ್ಧಭೂಮಿಯತ್ತ ಓಡಿದರು. ದಾರಿಯಲ್ಲಿ ಹೆಚ್ಚಿನ ಮಹಿಳೆಯರು ಪ್ರವಾದಿಯವರ ಸುರಕ್ಷತೆಯ ಸುದ್ದಿಯನ್ನು ಪಡೆದರು ಮತ್ತು ಅವರು ಅಲ್ಲಿಯೇ ಉಳಿದರು, ಆದರೆ ಓರ್ವ ಮಹಿಳೆ ಹುಚ್ಚುತನದಿಂದ ಉಹದ್ ಕ್ಷೇತ್ರದ ತನಕ ಹೋದರು. ಈ ಮಹಿಳೆಯ ಪತಿ, ಸಹೋದರ ಮತ್ತು ತಂದೆ ಉಹದ್‌ನಲ್ಲಿ ಕೊಲ್ಲಲ್ಪಟ್ಟಿದ್ದರು ಮತ್ತು ಕೆಲವು ವರದಿಗಳಲ್ಲಿ, ಒಬ್ಬ ಪುತ್ರನನ್ನು ಸಹ ಕೊಲ್ಲಲಾಯಿತು ಎಂದು ಹೇಳಲಾಗಿದೆ. ಆಕೆ ಮುಸ್ಲಿಂ ಸೇನೆಯ ಬಳಿಗೆ ಬಂದಾಗ ಹಝ್ರತ್ ಪೈಗಂಬರ್(ಸ)ರವರ ಸ್ಥಿತಿಗತಿಯ ಬಗ್ಗೆ ಸಹಾಬಿಯೊಬ್ಬರಲ್ಲಿ ವಿಚಾರಿಸಿದರು. ಮಾಹಿತಿದಾರನು ಹಝ್ರತ್ ಪೈಗಂಬರ್(ಸ) ಅವರಿಂದ ತೃಪ್ತನಾಗಿರುವುದರಿಂದ, ಆ ಮಹಿಳೆಗೆ ಹೇಳಿದರು. ಬೀಬೀ! ಈ ಯುದ್ಧದಲ್ಲಿ ನಿನ್ನ ತಂದೆಯು ಹತನಾದದ್ದು ವಿಷಾದದ ಸಂಗತಿಯಾಗಿದೆ. ಈ ಬಗ್ಗೆ ಮಹಿಳೆ ಹೇಳಿದಳು, ನೀವು ವಿಚಿತ್ರವಾಗಿದ್ದೀರಿ. ನಾನು ಹಝ್ರತ್ ಪೈಗಂಬರ್(ಸ) ಅವರ ಸ್ಥಿತಿ ಏನು ಎಂದು ಕೇಳುತ್ತಿದ್ದೇನೆ? ಆದರೆ ನೀವು ನನ್ನ ತಂದೆಯನ್ನು ಕೊಂದಿದ್ದಾರೆ ಎಂದು ಸುದ್ದಿ ನೀಡುತ್ತೀರಿ. ಅದಕ್ಕೆ, ಆ ಸಹಾಬಿ ಹೇಳಿದರು, ಬೀಬೀ! ಈ ಯುದ್ಧದಲ್ಲಿ ನಿಮ್ಮ ಪತಿಯೂ ಹತನಾದದ್ದಕ್ಕೆ ನನಗೆ ವಿಷಾದವಿದೆ. ಮತ್ತೆ ಆ ಮಹಿಳೆ ಹೇಳಿದಳು, ನಾನು ನನ್ನ ಪತಿಯ ಬಗ್ಗೆ ನಿಮ್ಮನ್ನು ಕೇಳಲಿಲ್ಲ. ಹಝ್ರತ್ ಪೈಗಂಬರ್(ಸ) ಅವರ ಸ್ಥಿತಿ ಏನು ಎಂದು ನಾನು ಕೇಳುತ್ತಿದ್ದೇನೆ. ಅದಕ್ಕೆ ಆ ಸಹಾಬಿ ಮತ್ತೆ ಹೇಳಿದರು. ಬೀಬೀ! ನಿನ್ನ ಸಹೋದರನೂ ಈ ಯುದ್ಧದಲ್ಲಿ ಹತನಾದನೆಂದು ನನಗೆ ವಿಷಾದವಿದೆ. ಮಹಿಳೆ ತುಂಬಾ ಉತ್ಸಾಹದಿಂದ ಹೇಳಿದಳು, ನಾನು ನನ್ನ ಸಹೋದರನ ಬಗ್ಗೆ ನಿನ್ನನ್ನು ಕೇಳಲಿಲ್ಲ. ನಾನು ನಿಮ್ಮನ್ನು ಹಝ್ರತ್ ಪೈಗಂಬರ್(ಸ) ಬಗ್ಗೆ ಕೇಳುತ್ತಿದ್ದೇನೆ, ಜನರು ಆಕೆಗೆ ತನ್ನ ತಂದೆ, ಸಹೋದರ ಮತ್ತು ಗಂಡನ ಸಾವಿನ ಬಗ್ಗೆ ಕಾಳಜಿ ವಹಿಸಲಿಲ್ಲ ಎಂದು ನೋಡಿದಾಗ. ಮತ್ತು ಆಕೆಯು ಕೇವಲ ಹಝ್ರತ್ ಪೈಗಂಬರ್(ಸ) ಅವರ ಯೋಗಕ್ಷೇಮವನ್ನು ಮಾತ್ರ ಕೇಳಲು ಬಯಸುತಿದ್ದಾಳೆ ಎಂದು ಅರಿತುಕೊಂಡಾಗ ಅವರು ಹೇಳಿದರು: ಬೀಬೀ! ಹಝ್ರತ್ ಪೈಗಂಬರ್(ಸ) ಆರೋಗ್ಯವಾಗಿದ್ದಾರೆ. ಅದಕ್ಕೆ ಆಕೆ ಹೇಳಿದಳು ಅವರು(ಸ) ಎಲ್ಲಿದ್ದಾರೆ? ನನಗೆ ಹೇಳಿ. ತದನಂತರ ಅವಳು ಹಝ್ರತ್ ಪೈಗಂಬರ್(ಸ) ನಿಂತಿರುವ ಸ್ಥಳದ ಕಡೆಗೆ ಓಡಿಹೋದಳು ಅಲ್ಲಿ ಹೋಗಿ ಹಝ್ರತ್ ಪೈಗಂಬರ್(ಸ) ಅವರ ಮುಂದೆ ಕುಳಿತುಕೊಂಡು ಹೇಳಿದಳು:

ಯಾ ರಸೂಲಲ್ಲಾಹ್(ಸ)! ನನ್ನ ತಾಯಿ ತಂದೆ ನಿಮಗೆ ಅರ್ಪಿತವಾಗಲಿ, ನೀವು ಸುರಕ್ಷಿತವಾಗಿರುವಾಗ, ಯಾರಾದರೂ ಸತ್ತರೆ ನನಗೇನು? ನನಗೆ ನಿಮ್ಮ ಪ್ರಾಣ ಮಾತ್ರ ಬೇಕಿತ್ತು. ನೀವು ಬದುಕಿದ್ದರೆ ಬೇರೆಯವರ ಸಾವಿನ ಚಿಂತೆ ನನಗಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್(ರೀ ಹೇಳುತ್ತಾರೆ: "ಈಗ ನೋಡಿ! ಈ ಮಹಿಳೆ ಹಝ್ರತ್ ಪೈಗಂಬರ್(ಸ) ರ ಮೇಲೆ ಎಷ್ಟು ಪ್ರೀತಿಯನ್ನು ಹೊಂದಿದ್ದಳು. ತನ್ನ ತಂದೆ, ಸಹೋದರ ಮತ್ತು ಪತಿಯ ಮರಣದ ಬಗ್ಗೆ ಜನರು ಒಂದರ ನಂತರ ಒಂದರಂತೆ ಅವಳಿಗೆ ಹೇಳುತ್ತಿದ್ದರು, ಆದರೆ ಪ್ರತಿ ಬಾರಿಯೂ ಅವಳು ಒಂದೇ ಮಾತನ್ನು ಹೇಳುತ್ತಿದ್ದಳು, "ಹಝ್ರತ್ ಪೈಗಂಬರ್(ಸ)ರವರ ಸ್ಥಿತಿ ಏನು ಎಂದು ಹೇಳಿ. ಆದುದರಿಂದ ಹಝ್ರತ್ ಪೈಗಂಬರ್(ಸ)ರ ಮೇಲೆ ಅಷ್ಟೊಂದು ಪ್ರೀತಿಯನ್ನು ತೋರಿದವಳು ಕೂಡ ಒಬ್ಬ ಮಹಿಳೆಯೇ ಆಗಿದ್ದಳು.

(ಖುರೂನೆ ಊಲಾ ಕೀ ಮುಸಲ್ಮಾನ್ ಖವಾತೀನ್, ಅನ್ವಾರುಲ್ ಉಲೂಮ್, ಸಂಪುಟ-25, ಪುಟ-439-440)

ನಂತರ, (ಖುರೂನೆ ಊಲಾ) ಇಸ್ಲಾಮಿನ ಆರಂಭ ಕಾಲದ ಆ ತ್ಯಾಗಶೀಲ ಸಹಾಬಿ ಸ್ತ್ರೀಯರ ಬಗ್ಗೆ ಉಹದ್ ಯುದ್ಧದಲ್ಲಿ ಯುದ್ಧದ ನಂತರದ ಪರಿಸ್ಥಿತಿಗಳನ್ನು ಚಿತ್ರಿಸುತ್ತಾ ಹಝ್ರತ್ ಪೈಗಂಬರ್(ಸ)ರವರ ಜೀವನ ಚರಿತ್ರೆ ಹಾಗೂ ಸಹಾಬಿ ಮತ್ತು ಮಹಿಳೆ ಸಹಾಬಿಯರ ಪ್ರೀತಿ ಹಾಗೂ ವಾತ್ಸಲ್ಯದ ಘಟನೆಗಳನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ)ರವರು ದೀಬಾಚಾ ತಫ್ಸೀರ್ ಅಲ್-ಖುರ್ಆನ್‌ನ

ಮುನ್ನುಡಿಯಲ್ಲಿ ಹೀಗೆ ಬರೆಯುತ್ತಾರೆ: "ಇಸ್ಲಾಮಿನ ಸೈನ್ಯವು ಮದೀನಾಗೆ ಹಿಂದಿರುಗಿದಾಗ, ಆ ಹೊತ್ತಿಗೆ ಹಝ್ರತ್ ಪೈಗಂಬರ್(ಸ)ರ ಹುತಾತ್ಮತೆಯ ಸುದ್ದಿ ಮತ್ತು ಇಸ್ಲಾಮಿನ ಸೈನ್ಯದ ಚದುರುವಿಕೆಯ ಸುದ್ದಿ ಮದೀನಾಗೆ ತಲುಪಿತ್ತು. ಮದೀನದ ಮಹಿಳೆಯರು ಮತ್ತು ಮಕ್ಕಳು ಉಹುದ್ ಕಡೆಗೆ ದಿಗ್ಭ್ರಾಂತ ಸ್ಥಿತಿಯಲ್ಲಿ ಓಡುತ್ತಿದ್ದರು. ಅವರಲ್ಲಿ ಹೆಚ್ಚಿನವರು ದಾರಿಯಲ್ಲಿ ಸುದ್ದಿಯನ್ನು ಪಡೆದಾಗ ಅಲ್ಲಿಯೇ ಉಳಿದರು, ಆದರೆ ಬನೂ ಸೀನಾರ್ ಗೋತ್ರದ ಮಹಿಳೆಯೊಬ್ಬಳು ದಿಗ್ಭ್ರಾಂತಳಾಗಿ ಮುಂದೆ ಸಾಗಿ ಉಹುದ್‌ಗೆ ತಲುಪಿದಳು. ಆಕೆ ಉಹುದ್ ಕ್ಷೇತ್ರದ ಕಡೆ ಹೋಗುತ್ತಿರುವಾಗ ಆ ಮಹಿಳೆಯ ಪತಿ, ಸಹೋದರ ಮತ್ತು ತಂದೆ ಕೊಲ್ಲಲ್ಪಟ್ಟಿದ್ದರು ಮತ್ತು ಕೆಲವು ವರದಿಗಳಲ್ಲಿ ಓರ್ವ ಪುತ್ರ ಸಹ ಕೊಲ್ಲಲ್ಪಟ್ಟಿದ್ದನು. ಆಕೆಗೆ ಅಕೆಯ ತಂದೆಯ ವಧೆಯ ಬಗ್ಗೆ ತಿಳಿಸಿದಾಗ ಅವಳು ಹೇಳಿದಳು ನನಗೆ ಹಝ್ರತ್ ಪೈಗಂಬರ್(ಸ)ರವರ ಯೋಗಕ್ಷೇಮದ ಬಗ್ಗೆ ತಿಳಿಸಿರಿ ಅವರು ಹೇಳಿದ್ದಾರೆ? ಎಂದು ಹೇಳಿದಳು. ಸುದ್ದಿ ನೀಡುವವರು ಹಝ್ರತ್ ಪೈಗಂಬರ್(ಸ)ಅವರ ಯೋಗಕ್ಷೇಮದಿಂದ ತೃಪ್ತರಾದ ಕಾರಣ, ಅವರು ತಮ್ಮ ಸಹೋದರ, ಪತಿ ಮತ್ತು ಪುತ್ರನ ಸಾವಿನ ಬಗ್ಗೆ ಸರದಿಯಲ್ಲಿ ಅವಳಿಗೆ ತಿಳಿಸುತ್ತಿದ್ದರು, ಆದರೆ ಅವಳು **ಮಾ ಫಅಲ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ** ಹೇಳುತ್ತಲೇ ಇದ್ದಳು, ಅಂದರೆ ಹಝ್ರತ್ ಪೈಗಂಬರ್(ಸ) ಅವರು ಏನು ಮಾಡಿದರು? ಸ್ಪಷ್ಟವಾಗಿ ಈ ವಾಕ್ಯವು ತಪ್ಪಾಗಿದೆ ಎಂದು ತೋರುತ್ತದೆ." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು, "ಈ ವಾಕ್ಯವು ತಪ್ಪಾಗಿದೆ ಎಂದು ತೋರುತ್ತದೆ ಆದ್ದರಿಂದ ಚರಿತ್ರೆಗಾರರು ಬರೆದಿರುವುದೇನೆಂದರೆ ಆ ವಾಕ್ಯದ ಅರ್ಥವೇನೆಂದರೆ ಹಝ್ರತ್ ಪೈಗಂಬರ್(ಸ) ಅವರು ಏನು ಮಾಡಿದರು? ಎಂದಾಗಿದೆ ಅಂದರೆ ಅವರು ಅದನ್ನು ಇನ್ನೊಂದು ರೀತಿಯಲ್ಲಿ ಅರ್ಥ ಮಾಡಿಕೊಂಡರು ಆದರೆ ವಾಸ್ತವವೇನೆಂದರೆ "ಈ ವಾಕ್ಯವು ತಪ್ಪಾಗಿಲ್ಲ ಬದಲಿಗೆ ಮಹಿಳೆಯರ ಅರ್ಥದಲ್ಲಿ ಸರಿಯಾಗಿದೆ. ಮಹಿಳೆಯ ಭಾವನೆಗಳು ತುಂಬಾ ತೀಕ್ಷ್ಣವಾಗಿರುತ್ತವೆ ಮತ್ತು ಕೆಲವೊಮ್ಮೆ ಆಕೆ ಸತ್ತವರನ್ನು ಜೀವಂತವಾಗಿದ್ದಾರೆ ಎಂದು ಭಾವಿಸಿ ಮಾತನಾಡುತ್ತಾಳೆ. ಉದಾಹರಣೆಗೆ ಕೆಲವು ಮಹಿಳೆಯರ ಪತಿ ಅಥವಾ ಪುತ್ರರು ಅಕಾಲಿಕ ಮರಣಕ್ಕೆ ಅವರನ್ನು ಉದ್ದೇಶಿಸಿ ಈ ರೀತಿಯ ಬಗ್ಗೆ ಮಾತುಗಳನ್ನು ಆಡುತ್ತಿರುತ್ತಾರೆ ಅಂದರೆ ನನನ್ನು ಯಾರಿಗಾಗಿ ಬಿಟ್ಟಿದ್ದೀರಿ? ಓ ಪುತ್ರನೇ! ಈ ವೃದ್ಧಾಪ್ಯದಲ್ಲಿ ನೀನೇಕೆ ನನ್ನಿಂದ ದೂರವಾದೆ? ಇದು ತೀವ್ರ ದುಃಖದಲ್ಲಿ ಮಾನವ ಸ್ವಭಾವದ ಅತ್ಯಂತ ಸೂಕ್ಷ್ಮ ಪ್ರದರ್ಶನವಾಗಿದೆ. ಅದೇ ರೀತಿ ಹಝ್ರತ್ ಪೈಗಂಬರ್(ಸ) ರವರ ಮರಣದ ಸುದ್ದಿ ಕೇಳಿದ ನಂತರ ಈ ಮಹಿಳೆಯ ಪರಿಸ್ಥಿತಿ ಸಂಭವಿಸಿದೆ. ಅವಳು ಹಝ್ರತ್ ಪೈಗಂಬರ್(ಸ) ಅವರು ನಿಧನ ಹೊಂದಿದ್ದಾರೆ ಎಂದು ಒಪ್ಪಿಕೊಳ್ಳಲು ಸಿದ್ಧಳಿರಲಿಲ್ಲ ಮತ್ತು ಇನ್ನೊಂದೆಡೆ ಅವಳು ಈ ಸುದ್ದಿಯನ್ನು ನಿರಾಕರಿಸಲು ಸಾಧ್ಯವಾಗಲಿಲ್ಲ. ಅದಕ್ಕಾಗಿಯೇ ಬಹಳ ದುಃಖದಲ್ಲಿ ಹೇಳಲಾಗುತ್ತಿತ್ತು, ಹಝ್ರತ್ ಪೈಗಂಬರ್(ಸ), ಅವರು ಏನು ಮಾಡಿದರು? ಅಂದರೆ, ಅಂತಹ ನಿಷ್ಠಾವಂತ ವ್ಯಕ್ತಿ ನಮಗೆ ಈ ಆಘಾತವನ್ನು ಉಂಟುಮಾಡಲು ಹೇಗೆ ಒಪ್ಪಿಕೊಂಡರು. ಅವಳು ತನ್ನ ತಂದೆ, ಸಹೋದರ ಮತ್ತು ಪತಿಯ ಬಗ್ಗೆ ಕಾಳಜಿ ವಹಿಸದಿರುವುದನ್ನು ಕಂಡು ಜನರು ಅವಳ ನಿಜವಾದ ಭಾವನೆಗಳನ್ನು ಅರ್ಥಮಾಡಿಕೊಂಡು ಹೇಳಿದರು. ಓ ತಾಯಿ! ಹಝ್ರತ್ ಪೈಗಂಬರ್(ಸ) ನಿಮ್ಮ ಇಚ್ಛೆಯಂತೆ, ದೇವರ ದಯೆಯಿಂದ ಯೋಗಕ್ಷೇಮವಾಗಿದ್ದಾರೆ. ಅದಕ್ಕೆ ಆಕೆ ಹೇಳಿದಳು ಅವರು ಎಲ್ಲಿದ್ದಾರೆ ನನಗೆ ತೋರಿಸಿ ಎಂದರು. ಅದಕ್ಕೆ ಜನರು ಹೇಳಿದರು: ಮುಂದೆ ಹೋಗಿ ಅವರು ಮುಂದೆ ನಿಂತಿದ್ದಾರೆ ಎಂದರು. ಆ ಮಹಿಳೆ ಅವರ(ಸ) ಬಳಿಗೆ ಓಡಿದಳು. ಆಕೆ ಹಝ್ರತ್ ಪೈಗಂಬರ್(ಸ)ರ ಪಾದಗಳನ್ನು ಹಿಡಿದು ಮಾತನಾಡಿದಳು. ಯಾ ರಸೂಲಲ್ಲಾಹ್(ಸ)! ನನ್ನ ತಂದೆ ತಾಯಿಯವರು ನಿಮಗೆ ಅರ್ಪಿತವಾಗಲಿ, ನೀವು ಸುರಕ್ಷಿತವಾಗಿರುವಾಗ ಯಾರಾದರೂ ಸತ್ತರೂ ನನಗೆ ಚಿಂತೆಯಿಲ್ಲ." ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳಿದರು, "ನೋಡಿ, ಪುರುಷರು ಯುದ್ಧದಲ್ಲಿ ವಿಶ್ವಾಸದ ಆ ಉದಾಹರಣೆಯನ್ನು ತೋರಿಸಿದರು ಮತ್ತು ಮಹಿಳೆಯರು ಪ್ರಾಮಾಣಿಕತೆಯ ಈ ಉದಾಹರಣೆಯನ್ನು ತೋರಿಸಿದರು, ಅದರ ಉದಾಹರಣೆ ಈಗಷ್ಟೆ ನಾನು ಉಲ್ಲೇಖಿಸಿದ್ದೇನೆ. ಮಗ್ದಲನ ಮರಿಯ ಮತ್ತು ಅವರ ಗೆಳತಿಯರು ಬೆಳಿಗ್ಗಿನ ಸಮಯದಲ್ಲಿ ಶತ್ರುಗಳು ಕಾಣದಂತೆ ಅವಿತುಕೊಂಡು ಈಸಾ ಮಸೀಹ್‌ರ ಖಬರಿನ ಬಳಿಗೆ ತಲುಪಿದರು ಎಂಬ ಧೈರ್ಯದ ಕಾರ್ಯದಿಂದಲೇ ಕ್ರೈಸ್ತರು ಸಂತೋಷಪಡುತ್ತಾರೆ. ಆದರೆ ನಾನು ಹೇಳುತ್ತೇನೆ – ಬನ್ನಿರಿ, ನನ್ನ ಪ್ರಿಯನ ನಿಷ್ಠಾವಂತರನ್ನು ಮತ್ತು ತ್ಯಾಗಶಾಲಿಗಳನ್ನು ನೋಡಿರಿ. ಎಂತಹ ಅವಸ್ಥೆಯಲ್ಲಿ ಅವರು ಹಝ್ರತ್ ಪೈಗಂಬರ್(ಸ)ರ ಜೊತೆಗಿದ್ದರು ಮತ್ತು ಎಂತಹ ಸ್ಥಿತಿಗಳಲ್ಲಿ ಅವರು ಏಕದೇವ ವಿಶ್ವಾಸದ ಧ್ವಜವನ್ನು ಎತ್ತಿ ಹಿಡಿದರು ಎಂದು ನೋಡಿರಿ....... ಹಝ್ರತ್ ಪೈಗಂಬರ್(ಸ) ಹುತಾತ್ಮರನ್ನು ದಫನ್ ಮಾಡಿದ ನಂತರ ಮದೀನಾಗೆ ಹಿಂತಿರುಗಿದಾಗ ಮಹಿಳೆಯರು ಮತ್ತು ಮಕ್ಕಳು ನಗರದಿಂದ ಹೊರಗೆ ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸಲು ಹೊರಬಂದರು. ಹಝ್ರತ್ ಪೈಗಂಬರ್(ಸ) ಅವರ ಒಂಟೆ ಲಗಾಮ್ ಅನ್ನು ಮದೀನದ ಗಣ್ಯವ್ಯಕ್ತಿ ಸಅದ್ ಬಿನ್ ಮುಆಧ್(ರ) ಹಿಡಿದಿದ್ದರು. ಈ ಘಟನೆಯನ್ನು ಮೊದಲೇ ಪ್ರಸ್ತಾಪಿಸಲಾಗಿದೆ ಸಅದ್ ಬಿನ್ ಮುಆಧ್(ರ) ಬಹಳ ಹೆಮ್ಮೆಯಿಂದ ಮುಂದೆ ಸಾಗುತ್ತಿದ್ದರು. ಬಹುಶಃ ನಾವು ಹಝ್ರತ್ ಪೈಗಂಬರ್(ಸ) ಅವರನ್ನು ಸುರಕ್ಷಿತವಾಗಿ ನಮ್ಮ ಮನೆಗೆ ಕರೆತಂದಿದ್ದೇವೆ ಎಂದು ಅವರು ಜಗತ್ತಿಗೆ ಹೇಳುತ್ತಿದ್ದರು." ಇದು ಸಹ ಒಂದು ರೀತಿಯ ಶೈಲಿಯಾಗಿದೆ. "ನಗರದ ಹತ್ತಿರ, ದೃಷ್ಟಿ ದುರ್ಬಲಗೊಂಡಿದ್ದ ತನ್ನ ವಯಸ್ಸಾದ ತಾಯಿ ಬರುತ್ತಿರುವುದನ್ನು ಅವರು ಕಂಡುಕೊಂಡರು. ಉಹುದ್‌ನಲ್ಲಿ, ಅವರ ಪುತ್ರರಲ್ಲಿ ಒಬ್ಬರಾದ ಅವ್ರ್ ಬಿನ್ ಮುಆಧ್(ರ) ಸಹ ವಧಿಸಲ್ಪಟ್ಟಿದ್ದರು" ಅದರ ವಿವರಗಳನ್ನು ನಾನು ಈಗಾಗಲೇ ವಿವರಿಸಿದ್ದೇನೆ. "...ಹಝ್ರತ್ ಪೈಗಂಬರ್(ಸ) ಹೇಳಿದರು. ಓ ತಾಯಿ! ನಿಮ್ಮ ಪುತ್ರ ಹುತಾತ್ಮರಾಗಿದ್ದರಿಂದ ನಾನು ಸಹಾನುಭೂತಿ ಹೊಂದಿದ್ದೇನೆ" ಅದಕ್ಕೆ ಆ ನೀತಿವಂತ ಮಹಿಳೆ ಹೇಳಿದರು. ಹುಝೂರ್! ನಾನು ನಿಮ್ಮನ್ನು ಸುರಕ್ಷಿತವಾಗಿ ನೋಡಿದಾಗ, ನಾನು ತೊಂದರೆಯನ್ನು ಹುರಿದು ತಿಂದಿದ್ದೇನೆ ಎಂದು ಅರ್ಥಮಾಡಿಕೊಳ್ಳಿ.

"ತೊಂದರೆಯನ್ನು ಹುರಿದು ತಿನ್ನಲಾಗಿದೆ" ಎಂಬುದು ಎಂತಹ ವಿಚಿತ್ರವಾದ ಮಾತಾಗಿದೆ. ಪ್ರೀತಿಯ ಭಾವನೆಗಳು ಎಷ್ಟು ಆಳವನ್ನು ಸೂಚಿಸುತ್ತವೆ. ದುಃಖವು ಒಬ್ಬ ವ್ಯಕ್ತಿಯನ್ನು ತಿನ್ನುತ್ತದೆ, ಆದರೆ ತನ್ನ ವೃದ್ಧಾಪ್ಯದಲ್ಲಿ ಕಬ್ಬು ಮುರಿದುಹೋದ ಮಹಿಳೆ, ನನ್ನ ಮಗನ ದುಃಖ ನನ್ನನ್ನು ಏನು ತಿನ್ನಬೇಕು ಹಝ್ರತ್ ಪೈಗಂಬರ್(ಸ) ಜೀವಂತವಾಗಿರುವಾಗ ನಾನು ಈ ದುಃಖವನ್ನು ಹುರಿದು ತಿನ್ನುತ್ತೇನೆ ಎಂದು ಅವಳು ಎಷ್ಟು ಧೈರ್ಯದಿಂದ ಹೇಳುತ್ತಾಳೆ.

ನನ್ನ ಮಗನ ಮರಣವು ನನ್ನನ್ನು ಕೊಲ್ಲಲು ಕಾರಣವಾಗುವುದಿಲ್ಲ, ಆದರೆ ಅವನು ಹಝ್ರತ್ ಪೈಗಂಬರ್(ಸ)ರವರ ಸಲುವಾಗಿ ಮರಣಹೊಂದಿದನು ಎಂಬ ಆಲೋಚನೆಯು ನನ್ನ ಶಕ್ತಿಯನ್ನು ಹೆಚ್ಚಿಸುತ್ತದೆ." ಹಝ್ರತ್ ಮುಸ್ಲೆಹ್ ಮೌಊದ್(ರ), ಅನ್ಸಾರ್‌ಗಳಿಗಾಗಿ ಪ್ರಾರ್ಥಿಸುವಾಗ ಮತ್ತು ಅವರ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳುತ್ತಾರೆ: "ಓ ಅನ್ಸಾರ್! ನಿಮಗೋಸ್ಕರ ನನ್ನ ಪ್ರಾಣ ತ್ಯಾಗವಾಗಲಿ, ನೀವು ಎಷ್ಟು ಪ್ರತಿಫಲವನ್ನು ತೆಗೆದುಕೊಂಡಿದ್ದೀರಿ." (ದೀಬಾಚಾ ತಫ್ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–255–257)

ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದ ನಂತರ ಮದೀನಕ್ಕೆ ತಲುಪಿದಾಗ ಕಪಟವಿಶ್ವಾಸಿಗಳು ಮತ್ತು ಯಹೂದಿಯರು ಖುಶಿಪಟ್ಟು ಮುಸ್ಲಿಮರನ್ನು ಬೈಯುತ್ತಾ ಹೀಗೆ ಹೇಳಿದರು: "ಮುಹಮ್ಮದ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ರಾಜತನವನ್ನು ಬಯಸುತ್ತಾರೆ (ನಊದುಬಿಲ್ಲಾಹ್). ಅವರು ನಷ್ಟ ಅನುಭವಿಸಿದ್ದಷ್ಟು ಬೇರೆ ಯಾವುದೇ ಪ್ರವಾದಿಗಳು ನಷ್ಟವನ್ನು ಅನುಭವಿಸಿಲ್ಲ. ಸ್ವತಃ ಗಾಯಗೊಂಡರು ಮತ್ತು ಸಹಾಬಿಯರು ಕೂಡ ಗಾಯಾಳುಗಳಾದರು. "ಕೊಲ್ಲಲ್ಪಟ್ಟ ಆ ಜನರು ನಮ್ಮ ಜೊತೆಗೆ ಇರುತ್ತಿದ್ದರೆ ಅವರು ಎಂದಿಗೂ ಕೊಲ್ಲಲ್ಪಡುತ್ತಿರಲಿಲ್ಲ." ಇಂತಹ ಮಾತುಗಳನ್ನು ಹೇಳುತ್ತಿದ್ದ ಕಪಟವಿಶ್ವಾಸಿಗಳನ್ನು ವಧಿಸಲು ಹಝ್ರತ್ ಉಮರ್(ರ) ಅನುಮತಿ ಕೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಲ್ಲದೇ ಬೇರೆ ಆರಾಧ್ಯನಿಲ್ಲ ಮತ್ತು ನಾನು ಅಲ್ಲಾಹನ ಪ್ರವಾದಿ ಎಂದು ಅವರು ಸಾಕ್ಷ್ಯ ನುಡಿಯುತ್ತಾರಲ್ಲವೇ? ಅವರು 'ಕಲಿಮ' ಹೇಳುತ್ತಿಲ್ಲವೇ? ಹಝ್ರತ್ ಉಮರ್(ರ) ಹೇಳಿದರು: ಹೌದು, ಅವರು ಕಲಿಮ ಉಚ್ಚರಿಸುತ್ತಾರೆ. ಆದರೆ ಖಡ್ಗದ ಭಯದಿಂದ. ಇಲ್ಲದಿದ್ದರೆ ಕಾಪಟ್ಯದ ಮಾತುಗಳನ್ನು ಹೇಗೆ ಹೇಳಬಲ್ಲರು? ಈಗ ಅವರ ಸಂಗತಿ ಬಹಿರಂಗಗೊಂಡಿದೆ ಮತ್ತು ಅವರ ಹೃದಯಗಳ ಮಾತು ಹೊರಗೆ ಬಂದಿದೆ ಹಾಗೂ ಅಲ್ಲಾಹನು ಅವರ ಮನಸ್ಸಿನಲ್ಲಿದ್ದ ಹಗೆಯನ್ನು ಬಯಲು ಮಾಡಿದ್ದಾನೆ. ಆದ್ದರಿಂದ ಈಗ ಅವರಿಂದ ಪ್ರತೀಕಾರ ಪಡೆಯಬೇಕು. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್ರಸೂಲುಲ್ಲಾಹ್ ಎಂದು ಹೇಳುತ್ತಾರೋ ಅವರನ್ನು ವಧಿಸುವುದನ್ನು ಅಲ್ಲಾಹನು ನಿಷಿದ್ಧಗೊಳಿಸಿದ್ದಾನೆ." (ಅಸ್ಸೀರತುಲ್ ಹಲಬೀಯಾ, ಭಾಗ–2, ಪುಟ–348, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ 2002)

ಲಾ ಇಲಾಹ ಇಲ್ಲಲ್ಲಾಹ್, ಮುಹಮ್ಮದುರ್ರಸೂಲುಲ್ಲಾಹ್ ಎಂದು ಹೇಳುವವರನ್ನು ಕೊಲ್ಲುವುದನ್ನು ನಾನು ನಿಷೇಧಿಸಲ್ಪಟ್ಟಿದ್ದೇನೆ. ಯಾರೇ ಈ ಕಲಿಮಾವನ್ನು ಪಠಿಸಲಿ ಅಂತಹವರನ್ನು ಕೊಲ್ಲುವುದನ್ನು ನನಗೆ ನಿಷೇಧಿಸಲಾಗಿದೆ. ಈ ಘಟನೆ ನಾಮಧಾರಿ ಮುಲ್ಲಾಗಳ ಬಾಯಿ ಮುಚ್ಚಿಸಲು

ಪರ್ಯಾಪ್ತವಾಗಿದೆ. ಅಹ್ಮದಿಯರಲ್ಲಿ ಕಪಟತೆಯ ಅಂಶ ಕೂಡ ಇಲ್ಲದಿದ್ದರೂ ಅಹ್ಮದಿಯರನ್ನು ಕಾಫಿರ್‌ಗಳೆಂದು ಅವರು ಸಾರುತ್ತಾರೆ ಮತ್ತು ಅಹ್ಮದಿಯರನ್ನು ವಧಿಸುವುದು ಅನುಮತನೀಯವೆಂದು ಹೇಳುತ್ತಾರೆ. ಇಂತಹ ನಾಮಧಾರಿ ಉಲೇಮಾಗಳು ಇಸ್ಲಾಮಿಗೆ ಕೆಟ್ಟ ಹೆಸರು ತರುತ್ತಾರೆ.

ಬುಖ್ಹಾರಿಯಲ್ಲಿ ಇರುವ ಒಂದು ವರದಿಯಿಂದ ಉಹುದಿನ ಶಹೀದರ ಉನ್ನತ ಸ್ಥಾನ ಮತ್ತು ಪದವಿಯ ಬಗ್ಗೆ ಅರಿವಾಗುತ್ತದೆ. ಉಖ್ಬ ಬಿನ್ ಆಮಿರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಎಂಟು ವರ್ಷಗಳ ನಂತರ ಉಹುದಿನ ಶಹೀದರ ಜನಾಝ ನಮಾಝ್ ನಿರ್ವಹಿಸಿದರು. ಅನಂತರ ಪ್ರವಚನ ಪೀಠವನ್ನೇರಿ ಹೀಗೆ ಹೇಳಿದರು: ನಾನು ನಿಮ್ಮ ನಾಯಕನಾಗಿದ್ದೇನೆ ಮತ್ತು ನಾನು ನಿಮಗೆ ಸಾಕ್ಷಿಯಾಗಿದ್ದೇನೆ. ನಿಮ್ಮನ್ನು ನಾನು ಹೌಝ್‌ನಲ್ಲಿ ಭೇಟಿಯಾಗುವೆನು. ನಾನು ಈಗ ನಿಂತಿರುವ ಸ್ಥಳದಿಂದ ಅದನ್ನು ನೋಡುತ್ತಿದ್ದೇನೆ. ನೀವು ಶಿರ್ಕ್ ಮಾಡುವಿರಿ ಎಂಬ ಭಯ ನನಗೆ ಇಲ್ಲ. ಆದರೆ ನೀವು ಲೌಕಿಕತೆಯಲ್ಲಿ ಮುಳುಗುವಿರಿ ಎಂಬ ಭಯ ನನಗೆ ಇದೆ. ನೀವು ಅದಕ್ಕಾಗಿ ಪರಸ್ಪರ ಸ್ಪರ್ಧಿಸಲು ತೊಡಗುವಿರಿ. (ಸಹೀಹ್ ಬುಖಾರಿ, ಕಿತಾಬುಲ್ ಮಗ್ಹಾಝಿ, ಹದೀಸ್–4042) ನಂತರದ ಘಟನೆಗಳಿಂದ ತಿಳಿದುಬರುವುದೇನೆಂದರೆ ಹಝ್ರತ್ ಪೈಗಂಬರ್(ಸ)ರವರ ಈ ಭಯ ಸರಿಯಾಗಿತ್ತು?

ಹಝ್ರತ್ ಜಾಬಿರ್(ರ) ವರದಿ ಮಾಡುತ್ತಾರೆ – ಹಝ್ರತ್ ಪೈಗಂಬರ್(ಸ) ಹೀಗೆ ಹೇಳುತ್ತಿದ್ದರು: ನನಗೆ ಉಹುದಿನ ಶಹೀದರ ನೆನಪು ಬರುವಾಗ ಅಲ್ಲಾಹನಾಣೆ, ನಾನು ಕೂಡ ನನ್ನ ಸಂಗಡಿಗರ ಜೊತೆಗೆ ಪರ್ವತದ ಕಣಿವೆಯಲ್ಲಿ ಉಳಿಯುತ್ತಿದ್ದರೆ ಎಷ್ಟು ಚೆನ್ನಾಗಿತ್ತು ಎಂಬ ಬಯಕೆ ಉಂಟಾಗುತ್ತದೆ. ಎಂದರೆ ಅವರ ಜೊತೆಗೆ ಶಹೀದ್ ಆಗುವ ಬಯಕೆ. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಸಂಪುಟ–5, ಪುಟ–1627, ಕಿತಾಬುಲ್ ಮಗ್ಹಾಝಿ ವಸ್ಸರಾಯಾ, ಹದೀಸ್–4318, ಮಕ್ತಬ ನಝಾರ್ ಮುಸ್ತಫಾ 2000)

ಅಬ್ದುಲ್ಲಾ ಬಿನ್ ಫರ್ವ ತಮ್ಮ ತಂದೆಯವರಿಂದ ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಉಹುದಿನ ಶಹೀದರ ಖಬರನ್ನು ಸಂದರ್ಶಿಸಿದರು ಮತ್ತು ಹೀಗೆ ದುಆ ಮಾಡಿದರು: **ಅಲ್ಲಾಹುಮ್ ಇನ್ನ ಅಬ್ದಕ ವನಬಿಯ್ಯಕ ಯಶ್‌ಹದು ಅನ್ನ ಹಾಉಲಾಯಿ ಶುಹದಾಉ, ವ ಅನ್ನಹೂ ಮನ್ ಝಾರಹುಮ್– ವಸಲ್ಲಮ ಅಲೈಹಿಮ್ ಇಲಾ ಯೌಮಿಲ್ ಖಿಯಾಮತಿ ರದ್ದು ಅಲೈಹಿ–** ಹೇ ಅಲ್ಲಾಹ್, ನಿನ್ನ ದಾಸ ಮತ್ತು ಪ್ರವಾದಿಯಾದ ನಾನು ಸಾಕ್ಷಿ ಹೇಳುತ್ತೇನೆ, ನಿಸ್ಸಂದೇಹವಾಗಿಯೂ ಈ ಜನರು ಶಹೀದರು. ಯಾರು ಅವರ ಖಬರ್ ಸಂದರ್ಶನ ಮಾಡುತ್ತಾರೋ ಮತ್ತು ಖಿಯಾಮತ್ ದಿನದ ತನಕ ಸಲಾಂ ಹೇಳುತ್ತಾರೋ ಅವರ ಸಲಾಮಿಗೆ ಈ ಶಹೀದರು ಉತ್ತರಿಸುವರು. (ಅಲ್‌ಮುಸ್ತದ್ರಿಕ್ ಅಲಸ್ಸಹೀಹೈನ್, ಸಂಪುಟ–5, ಪುಟ–1627–1628, ಕಿತಾಬುಲ್ ಮಗ್ಹಾಝಿ ವಸ್ಸರಾಯಾ, ಹದೀಸ್–4318, ಮಕ್ತಬ ನಝಾರ್ ಮುಸ್ತಫಾ 2000)

ಹಝ್ರತ್ ಪೈಗಂಬರ್(ಸ) ಉಹುದ್ ಯುದ್ಧದ ಹುತಾತ್ಮರಿಗಾಗಿ ಹೇಳಿದರು. **ಹಾಉಲಾಇ ಅಶ್‌ಹದು ಅಲೈಹಿಮ್–** ನಾನು ಸಾಕ್ಷಿಯಾಗಿರುವ ಜನರು ಇವರಾಗಿದ್ದಾರೆ. ಹಝ್ರತ್ ಅಬೂಬಕರ್ ಸಿದ್ದೀಕ್(ರ.ಅ) ಹೇಳಿದರು, ಯಾ ರಸೂಲಲ್ಲಾಹ್(ಸ)!! ನಾವು ಅವರ ಸಹೋದರರಲ್ಲವೇ? ಅವರು ಮುಸಲ್ಮಾನರಾದ ಹಾಗೆ ನಾವೂ ಮುಸಲ್ಮಾನರಾದೆವು ಮತ್ತು ಅವರು ಜಿಹಾದ್ ಮಾಡಿದಂತೆ ನಾವೂ ಜಿಹಾದ್ ಮಾಡಿದ್ದೇವೆ. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ಹೌದು, ಆದರೆ ನನ್ನ ಬಳಿಕ ನೀವು ಏನು ಮಾಡುತ್ತೀರಿ ಎಂದು ನನಗೆ ತಿಳಿದಿಲ್ಲ, ಅದಕ್ಕೆ ಹಝ್ರತ್ ಅಬೂಬಕರ್(ರ) ಅಳಲು ಪ್ರಾರಂಭಿಸಿದರು ಮತ್ತು ಹೇಳಿದರು ನಿಮ್ಮ ನಂತರ ನಾವು ಬದುಕುತ್ತೇವೆಯೇ? (ಅಲ್‌ಮೌತಾ ಇಮಾಮ್ ಮಾಲಿಕ್ ಪುಟ–282, ಕಿತಾಬುಲ್ ಜುಹಾದ್ ಬಾಬ್ ಅಶ್ಶುಹದಾ ಫೀ ಸಬೀಲಿಲ್ಲಾಹ್, ಹದೀಸ್–1004, ದಾರುಲ್ ಫಿಕರ್ ಬೈರೂತ್) ಈ ದುಃಖದಿಂದಲೇ ಹಝ್ರತ್ ಅಬೂಬಕರ್(ರ) ಅಳಲು ಆರಂಭಿಸಿದರು ಬಹುಶಃ ನಮ್ಮ ಜೀವನವು ಹಝ್ರತ್ ಪೈಗಂಬರ್(ಸ) ಅವರಿಗಿಂತ ಹೆಚ್ಚು ಇರಬಹುದು ಎಂದು.

ಅಬ್ಬಾದ್ ಬಿನ್ ಅಬಿ ಸಾಲಿಹ್ ವರದಿ ಮಾಡುತ್ತಾರೆ ಹಝ್ರತ್ ಪೈಗಂಬರ್(ಸ) ಪ್ರತಿ ವರ್ಷದ ಆರಂಭದಲ್ಲಿ ಉಹುದಿನ ಶಹೀದರ ಖಬರುಗಳ ಸಂದರ್ಶನಕ್ಕೆ ಹೋಗುತ್ತಿದ್ದರು. ಆಗ ಹೇಳುತ್ತಿದ್ದರು **ಸಲಾಮುನ್ ಅಲೈಕುಮ್ ಬಿಮಾ ಸಬರ್‌ತುಮ್ ಫನಿಅ್ಮ ಉಖ್ಬದ್ದಾರಿ–** ವರದಿಗಾರ ಹೇಳುತ್ತಾರೆ: ನಂತರದ ಕಾಲದಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಉಸ್ಮಾನ್(ರ) ಸಹ ಅದೇ ರೀತಿ ಆ ಶಹೀದರ ಖಬರುಗಳ ಬಳಿಗೆ ಹೋಗುತ್ತಿದ್ದರು. (ತಾರಿಖ್ ಅಲ್–ಮದೀನಾ ಅಲ್–ಮುನಾವರಾಹ್, ಸಂಪುಟ–1 ಪುಟ 85–86, ಹದೀಸ್–381, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಅವರು ಹೇಳುತ್ತಾರೆ: "ಹಝ್ರತ್ ಪೈಗಂಬರ್(ಸ)ರವರು ತಮ್ಮ ನಿಧನದ ಸಮಯದಲ್ಲಿ ವಿಶೇಷವಾಗಿ ಉಹುದ್ ಹುತಾತ್ಮರಿಗೆ ನಮಾಝುನ್ನು ನಿರ್ವಹಿಸಿದರು ಮತ್ತು ಬಹಳ ನೋವುಭರಿತ ಹೃದಯದಿಂದ ಪ್ರಾರ್ಥಿಸಿದರು. ಹಝ್ರತ್ ಪೈಗಂಬರ್(ಸ) ರವರು ಉಹುದ್‌ನ ಹುತಾತ್ಮರನ್ನು ವಿಶೇಷ ಪ್ರೀತಿ ಮತ್ತು ಗೌರವದಿಂದ ನೋಡುತ್ತಿದ್ದರು. ಒಮ್ಮೆ ಅವರು(ಸ) ಉಹದ್‌ನ ಹುತಾತ್ಮರ ಖಬರ್‌ಗಳ ಬಳಿ ಹಾದುಹೋದಾಗ ಹೇಳಿದರು: ನಾನುಇಲ್ಲಿರುವ ಜನರ ವಿಶ್ವಾಸಕ್ಕೆ ಸಾಕ್ಷಿಯಾಗಿರುವನು. ಹಝ್ರತ್ ಅಬೂಬಕರ್(ರ) ಹೇಳಿದರು, ಯಾ ರಸೂಲಲ್ಲಾಹ್(ಸ)! ನಾವು ಅವರ ಸಹೋದರರಲ್ಲವೇ? ಅವರಂತೆ ನಾವೂ ಇಸ್ಲಾಂ ಅನ್ನು ಸ್ವೀಕರಿಸಲಿಲ್ಲವೇ? ನಾವು ಅವರಂತೆ ದೇವರ ಮಾರ್ಗದಲ್ಲಿ ಹೋರಾಡಲಿಲ್ಲವೇ? ಅದಕ್ಕೆ ಅವರು(ಸ) ನುಡಿದರು: ಹೌದು! ಆದರೆ ನನ್ನ ನಂತರ ನೀವು ಏನು ಮಾಡುತ್ತೀರಿ ಎಂದು ನನಗೆ ತಿಳಿದಿಲ್ಲ. ಯಾ ರಸೂಲಲ್ಲಾಹ್(ಸ)! ನಿಮ್ಮ ನಂತರ ನಾವು ಬದುಕಲು ಸಾಧ್ಯವಾಗುತ್ತದೆಯೇ? ಈ ಪರಿಕಲ್ಪನೆಯು ನಮ್ಮನ್ನು ಕೊಲ್ಲುತ್ತದೆ. ನಂತರ ಅವರು(ರ) ಬರೆಯುತ್ತಾರೆ "ಸಹಾಬಿಗಳು ಸಹ ಉಹುದ್‌ನ ಹುತಾತ್ಮರನ್ನು ಬಹಳ ಗೌರವಿಸುತ್ತಿದ್ದರು ಮತ್ತು ಉಹದ್‌ನ ಸ್ಮರಣೆಯನ್ನು ತಮ್ಮ ಹೃದಯದಲ್ಲಿ ಬಹಳ ಪಾವಿತ್ರ್ಯತೆಯಿಂದ ವಿಷಯವಾಗಿ ಇರಿಸಿಕೊಂಡರು. ಹೀಗಾಗಿ, ಒಮ್ಮೆ ಹಝ್ರತ್ ಪೈಗಂಬರ್(ಸ)ರವರ ಮರಣದ ನಂತರ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಅವರ ಮುಂದೆ ಇಫ್ತಾರ್‌ನ ಊಟ ಬಂದಾಗ, ಅದು ಬಹುಶಃ ಬಹಳ ಕಷ್ಟದಿಂದ ತಯಾರಿಸಲ್ಪಟ್ಟಿರಬಹುದು. ಅದನ್ನು ಕಂಡಾಗ ಅವರಿಗೆ ಉಹುದ್‌ನ ಕಾಲ ನೆನಪಿಗೆ ಬಂತು, ಅಂದು ಮುಸ್ಲಿಮರು ತಮ್ಮ ಹುತಾತ್ಮರನ್ನು ಮುಚ್ಚಲು ಬಟ್ಟೆಯನ್ನು ಸಹ ಹೊಂದಿರಲಿಲ್ಲ ಮತ್ತು ಅವರು ಆ ಹುತಾತ್ಮರ ದೇಹಗಳನ್ನು ಮರೆಮಾಡಲು ಹುಲ್ಲನ್ನು ಕತ್ತರಿಸಿ ಅವುಗಳ ಮೇಲೆ ಸುತ್ತುತ್ತಿದ್ದರು ಮತ್ತು ಈ ಸ್ಮರಣೆಯು ಅಬ್ದುಲ್–ರಹಮಾನ್ ಬಿನ್ ಔಫ್(ರ) ಅವರನ್ನು ತುಂಬಾ ಚಿಂತೆಗೀಡುಮಾಡಿತು. ಅವರು ಹತಾಶೆಯಿಂದ ಅಳಲು ಪ್ರಾರಂಭಿಸಿದರು ಮತ್ತು ಅವರು ಉಪವಾಸವಿದ್ದರೂ ಆಹಾರವನ್ನು ಬಿಟ್ಟು ಎದ್ದರು." (ಸೀರತ್ ಖಾತಮನ್ನಬೀಯೀನ್(ಸ), ಹಝ್ರತ್ ಸಾಹಿಬ್ಝಾದ ಮಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್ ಸಾಹಿಬ್ ಎಂ.ಎ, ಪುಟ–502)

ಉಹುದ್ ಹುತಾತ್ಮರ ಕುಟುಂಬಗಳಿಂದ ಸಾಂತ್ವನದ ಘಟನೆಗಳು ಮತ್ತು ಹುತಾತ್ಮರ ಮಕ್ಕಳ ಮೇಲಿನ ಪ್ರೀತಿಯ ಅಭಿವ್ಯಕ್ತಿಗಳನ್ನು ಸಹ ಉಲ್ಲೇಖಿಸಲಾಗಿದೆ. ಹಝ್ರತ್ ಬಿಶರ್(ರ)ರ ತಂದೆ ಹಝ್ರತ್ ಅಖ್ರಬ(ರ) ಉಹುದ್‌ನಲ್ಲಿ ಶಹೀದ್ ಆಗಿದ್ದರು. ಅವರು ತನ್ನ ತಂದೆಗಾಗಿ ಅಳುತ್ತಿದ್ದರು. ಅಷ್ಟರಲ್ಲಿ ಅಲ್ಲಿಂದ ದಾಟಿ ಹೋಗುತ್ತಿದ್ದ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: **ಉಸ್ಕುಕ್, ಅಮಾ ತರ್‌ಝಾ ಅನ್ ಅಕೂನ ಅನ ಅಬೂಕ ವ ಆಇಶತು ಉಮ್ಮುಕ–** ಸುಮ್ಮನಿರು, ನಾನು ನಿನ್ನ ತಂದೆ ಮತ್ತು ಆಯಿಶ ನಿನ್ನ ತಾಯಿ ಆಗುವೆವು ಎಂಬುದರಿಂದ ನಿನಗೆ ಸಂತೋಷವಿಲ್ಲವೇ? ಬಿಶರ್(ರ) ಹೇಳಿದರು: ಏಕಿಲ್ಲ ಯಾ ರಸೂಲಲ್ಲಾಹ್, ಇದಕ್ಕಿಂತ ಸಂತೋಷಕರ ಮಾತು ಬೇರೇನಿದೆ? ಅನಂತರ ಹಝ್ರತ್ ಪೈಗಂಬರ್(ಸ) ಅವರ ತಲೆಯನ್ನು ಸವರಿದರು. ಹಝ್ರತ್ ಬಿಶರ್(ರ) ವೃದ್ಧರಾದಾಗ ಅವರ ತಲೆಕೂದಲು ಪೂರ್ಣವಾಗಿಯೂ ಬೆಳ್ಳಗೆಯಾಯಿತು. ಆದರೆ ಹಝ್ರತ್ ಪೈಗಂಬರ್(ಸ) ತನ್ನ ಅನುಗ್ರಹೀತ ಹಸ್ತದಿಂದ ಸವರಿದ ಕೂದಲಿನ ಭಾಗ ಕಪ್ಪಾಗಿಯೇ ಉಳಿಯಿತು. ಹಝ್ರತ್ ಬಿಶರ್(ರ) ಮಾತನಾಡುವಾಗ ತೊದಲುತ್ತಿದ್ದರು. ಹಝ್ರತ್ ಪೈಗಂಬರ್(ಸ) ದಮ್ ಮಾಡಿದಾಗ ಅವರ ಉಗ್ಗು ಮೆಲ್ಲ ಮೆಲ್ಲನೇ ಇಲ್ಲವಾಯಿತು. (ಸೀರತ್ ಇನ್‌ಸೈಕ್ಲೋಪೀಡಿಯಾ, ಸಂಪುಟ–06, ಪುಟ–357, ದಾರುಸ್ಸಲಾಮ್ ರಿಸರ್ಚ್ ಸೆಂಟರ್) (ಅಲ್‌ಅಸಾಬ, ಸಂಪುಟ–4, ಪುಟ–437, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಅಸದುಲ್‌ಗ್ಹಾಬ, ಸಂಪುಟ–1, ಪುಟ–388, ದಾರುಲ್ ಕುತುಬ್ ಇಲ್‌ಮಿಯಾ ಬೈರೂತ್)

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಅವರೊಂದಿಗೆ ಸಾಂತ್ವಾನಿಸಿದ ಘಟನೆ ಇದೆ. ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾ(ರ) ಹೇಳುತ್ತಾರೆ: ನಾನು ಹಝ್ರತ್ ಪೈಗಂಬರ್(ಸ)ರನ್ನು ಭೇಟಿಯಾದಾಗ ಅವರು(ಸ) ಹೇಳಿದರು. ಓ ಜಾಬಿರ್! ಏನು ವಿಷಯ, ನೀವು ದುಃಖಿತರಾಗಿರುವುದನ್ನು ನಾನು ನೋಡುತ್ತೇನೆ. ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ)! ನನ್ನ ತಂದೆ ಉಹುದ್ ಯುದ್ಧದಲ್ಲಿ ಹುತಾತ್ಮರಾದರು ಮತ್ತು ಅವರು ಸಾಲ ಮತ್ತು ಮಕ್ಕಳನ್ನು ತೊರೆದಿದ್ದಾರೆ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನಿಮ್ಮ ತಂದೆಯನ್ನು ಭೇಟಿ ಮಾಡಿದ ಸಂತೋಷದ ಸುದ್ದಿಯನ್ನು ನಾನು ನಿಮಗೆ ನೀಡುವುದಿಲ್ಲವೇ? ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ) ಅವಶ್ಯಕವಾಗಿ ನೀಡಿರಿ. ಅವರು(ಸ)

ಹೇಳಿದರು: ಸರ್ವಶಕ್ತನಾದ ಅಲ್ಲಾಹನು ಪರದೆಯ ಹಿಂದಿನಿಂದ ಹೊರತುಪಡಿಸಿ ಯಾರೊಂದಿಗೂ ಮಾತನಾಡಲಿಲ್ಲ. ಅಲ್ಲಾಹನು ಯಾರೊಂದಿಗೆ ಮಾತನಾಡುತ್ತಾನೋ ಅವನು ಪರದೆಯ ಹಿಂದಿನಿಂದ ಮಾತನಾಡಿದನು, ಆದರೆ ಸರ್ವಶಕ್ತನಾದ ಅಲ್ಲಾಹನು ನಿಮ್ಮ ತಂದೆಯನ್ನು ಪುನಃ ಜೀವಂತಗೊಳಿಸಿದನು ಮತ್ತು ನಂತರ ಅವನೊಂದಿಗೆ ಮುಖಾಮುಖಿಯಾಗಿ ಮಾತನಾಡಿ ಹೇಳಿದನು: ಓ ನನ್ನ ದಾಸನೇ! ನೀನು ನನ್ನೊಂದಿಗೆ ಕೇಳು ನಾನು ನಿನಗೆ ನೀಡುವೆನು. ಅದಕ್ಕೆ ಅವರು ಹೇಳಿದರು: ಓ ನನ್ನ ಪ್ರಭು! ನಿನ್ನ ಮಾರ್ಗದಲ್ಲಿ ನಾನು ಮತ್ತೆ ಕೊಲ್ಲಲ್ಪಡುವಂತೆ ನನ್ನನ್ನು ಪುನಃ ಜೀವಂತಗೊಳಿಸು. ಒಂದು ವರದಿಯಲ್ಲಿ ಈ ಸಂದರ್ಭದಲ್ಲಿ ಹಝ್ರತ್ ಅಬ್ದುಲ್ಲಾ(ರ) ಹೇಳಿದರು: ಓ ನನ್ನ ಪ್ರಭೂ! ನಿನ್ನನ್ನು ಆರಾಧಿಸುವ ಹಕ್ಕನ್ನು ನಾನು ನೀಡಲಿಲ್ಲ, ನೀನು ನನ್ನನ್ನು ಈ ಜಗತ್ತಿಗೆ ಪುನಃ ಹಿಂತಿರುಗಿಸಬೇಕೆಂದು ನಾನು ಬಯಸುತ್ತೇನೆ, ಇದರಿಂದ ನಾನು ನಿನ್ನ ಮಾರ್ಗದಲ್ಲಿ ನಿನ್ನ ಪ್ರವಾದಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಹೋರಾಡುತ್ತೇನೆ ಮತ್ತು ನಿನ್ನ ಮಾರ್ಗದಲ್ಲಿ ಮತ್ತೆ ಕೊಲ್ಲಲ್ಪಡುತ್ತೇನೆ. ಅದಕ್ಕೆ ಅಲ್ಲಾಹನು ನುಡಿದನು: ಒಮ್ಮೆ ಮೃತರಾದವರನ್ನು ಮತ್ತೆ ಇಹಲೋಕಕ್ಕೆ ಕರೆತರುವುದಿಲ್ಲ ಎಂದು ನಾನು ನಿರ್ಧರಿಸಿದ್ದೇನೆ. ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ಸರ್ವಶಕ್ತನಾದ ಅಲ್ಲಾಹನನ್ನು ಕೇಳಿದರು: ಓ ನನ್ನ ಪ್ರಭು! ನನ್ನ ಹಿಂದೆ ಇರುವವರಿಗೆ ಇದನ್ನು ತಿಳಿಸಿ. ಆ ಸಂದರ್ಭದಲ್ಲಿ, ಸರ್ವಶಕ್ತನಾದ ಅಲ್ಲಾಹನು ಈ ವಚನವನ್ನು ಅವತರಿಸಿದನು: **ವಲಾ ತಹ್‌ಸಬನ್ನಲ್ಲರಿಝೀನ ಖುತಿಲೂ ಫೀ ಸಬೀಲಿಲ್ಲಾಹಿ ಅಮ್ವಾತನ್ ಬಲ್ ಅಹ್‌ಯಾಉನ್ ಇಂದ ರಬ್ಬಿಹಿಮ್ ಯರ್ಝುಖೂನ್** (ಆಲಿ ಇಮ್ರಾನ್: 170) ಅಂದರೆ: ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟವರು ಮೃತರೆಂದು ನೀವು ಭಾವಿಸಬೇಡಿರಿ. ಅವರು ತಮ್ಮ ಒಡೆಯನ ಬಳಿ ಜೀವಂತರು; ಅವರಿಗೆ ಆಹಾರ ನೀಡಲಾಗುತ್ತದೆ. (ಸುನನ್ ಅಲ್-ತಿರ್ಮಿದಿ, ಬಾಬ್ ತಫ್ಸಿರ್ ಅಲ್-ಖುರ್‌ಆನ್, ಹದೀಸ್-3010) (ದಲಾಎಲುನ್ನಬೂವ, ಬೈಹಾಖಿ, ಭಾಗ-3, ಪುಟ-298, ದಾರುರ್‍ರೈಯಾನ್ ಲಿತ್ತುರಾಸುಲ್ ಖಾಹಿರ 1988) (ಅಲ್‌ಇಸ್ತಿಯಾಬ್, ಭಾಗ-3, ಪುಟ-955-956, ದಾರುಲ್ ಜೀಲ್ ಬೈರುತ್)

ಆದಾಗ್ಯೂ, ನಾನು ಮೊದಲೇ ಹೇಳಿದಂತೆ. ವಚನದ ಅವತರಣಿಕೆಗೆ ಇದು ಕಾರಣವೇ ಅಥವಾ ಇಲ್ಲ ಎಂಬುದು ನಿಜವೋ ಅಲ್ಲವೋ ಎಂಬುದು ಗೊತ್ತಿಲ್ಲ, ಆದರೆ ಹುತಾತ್ಮರು ತಮ್ಮ ಮರಣದ ನಂತರವೇ ಸ್ವರ್ಗದ ಅತ್ಯುನ್ನತ ಸ್ಥಾನವನ್ನು ಪಡೆಯುತ್ತಾರೆ ಎಂಬುದು ನಿಜಸಂಗತಿಯಾಗಿದೆ.

ಸರ್ವಶಕ್ತನಾದ ಅಲ್ಲಾಹನು ಮತ್ತು ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್(ರ) ನಡುವಿನ ಸಂಭಾಷಣೆಯ ವಿವರಗಳು, ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರು ಹಝ್ರತ್ ಪೈಗಂಬರ್(ಸ)ರವರ ಜೀವನಚರಿತ್ರೆಯ ಬಗ್ಗೆ ತಮ್ಮ ಒಂದು ಭಾಷಣವೊಂದರಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಸಹಾಬರೊಂದಿಗಿನ ಸಂಬಂಧವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಹಝ್ರತ್ ಪೈಗಂಬರ್(ಸ) ಅವರ ಬಗ್ಗೆ ಸಹಾಬಿಗಳ ಪ್ರೀತಿ ಮತ್ತು ಅವರ ಮೇಲಿನ ಅಲ್ಲಾಹನ ಪ್ರೀತಿ ಹೇಗಿತ್ತು ಎಂಬುದನ್ನು ವಿವರಿಸುವಾಗ ಅವರು ಹೇಳುತ್ತಾರೆ, "ಈ ಘಟನೆಯಲ್ಲಿ, ಅನೇಕ ರೀತಿಯ ಸೌಂದರ್ಯವಿದೆ, ಮತ್ತು ನಾವು ಅದನ್ನು ನೋಡುವ ರೀತಿಯಲ್ಲಿ ಹೊಸ ದಿಗಂತಗಳನ್ನು ತೋರಿಸುತ್ತದೆ. ಹಝ್ರತ್ ಪೈಗಂಬರ್(ಸ) ಅವರು ತಮ್ಮ ಭಗವಂತನೊಂದಿಗೆ ಹೇಗೆ ನಿರಂತರವಾಗಿ ಸಂಪರ್ಕದಲ್ಲಿದ್ದರು ಎಂಬುದನ್ನು ಇದು ನಮಗೆ ತೋರಿಸುತ್ತದೆ. ಅವರು ದಾಸರನ್ನು ಸಹಾನುಭೂತಿಯಿಂದ ನೋಡುತ್ತಿದ್ದರು ಮತ್ತು ಅವರ ಹೃದಯವು ಭಗವಂತನಲ್ಲಿ ಐಕ್ಯವಾಗಿತ್ತು. ಒಂದು ಕಡೆ ಅವರು ಸಹಾಬರವರ ಮೇಲೆ ಬಾಗಿದ್ದರು, ಇನ್ನೊಂದು ಬದಿಯು ಸರ್ವಶಕ್ತನಾದ ಅಲ್ಲಾಹನೊಂದಿಗೆ ನಿಕಟ ಸಂಬಂಧವನ್ನು ಹೊಂದಿತ್ತು. ಶಾಂತಿಯ ಸ್ಥಿತಿಯಲ್ಲಿ, **ಸುಮ್ಮ ದನಾ ಫತದಲ್ಲಾ** (ಅಲ್-ನಜ್ಮ್: 9) ಅತ್ಯುನ್ನತ ದಿಗಂತದಲ್ಲಿ ಉಳಿದುಕೊಂಡಿರುವ ಜೀವಿ, ಯುದ್ಧದ ಸ್ಥಿತಿಯಲ್ಲಿಯೂ ಅವನಿಂದ ಒಂದು ಕ್ಷಣವೂ ಬೇರ್ಪಟ್ಟಿಲ್ಲ. ಒಂದು ಕಣ್ಣು ಯುದ್ಧಭೂಮಿಯನ್ನು ನೋಡುತ್ತಿದ್ದರೆ ಇನ್ನೊಂದು ಕಣ್ಣು ಜಮಾಲ್-ಎ-ಯಾರ್ (ಅಲ್ಲಾಹನನ್ನು) ಅನ್ನು ನೋಡುವುದರಲ್ಲಿ ನಿರತವಾಗಿತ್ತು. ಒಂದು ಕಿವಿ ಕರುಣೆಯಿಂದ ಸಹಾಬಿಗಳ ಕಡೆಗೆ ವಾಲಿದರೆ, ಇನ್ನೊಂದು ಕಿವಿ ತನ್ನ ಭಗವಂತನ ಸಿಹಿ ಮಾತುಗಳನ್ನು ಕೇಳುವುದರಲ್ಲಿ ನಿರತವಾಗಿತ್ತು. ಕೈ ಕೆಲಸದಲ್ಲಿ ನಿರತವಾಗಿದ್ದರೆ ಹೃದಯ ಅಲ್ಲಾಹನಲ್ಲಿ ನಿರತವಾಗಿತ್ತು. ಹಝ್ರತ್ ಪೈಗಂಬರ್(ಸ)ರವರು ತಮ್ಮ ಸಹಾಬಿಗಳನ್ನು ಸಾಂತ್ವನ ನೀಡುತ್ತಿದ್ದರು, ಆದ್ದರಿಂದ ದೇವರು ಅವರನ್ನು ಸಮಾಧಾನಪಡಿಸುತ್ತಿದ್ದನು. ಅಬ್ದುಲ್ಲಾ ಬಿನ್ ಅಮ್ರ್(ರ) ಅವರ ಹೃದಯ ಸ್ಥಿತಿಯ ಸುದ್ದಿಯನ್ನು ನೀಡುವ ಮೂಲಕ, ಅಲ್ಲಾಹನು ಹಝ್ರತ್ ಪೈಗಂಬರ್(ಸ) ಅವರಿಗೆ ಈ ಸಂದೇಶವನ್ನು ನೀಡುತ್ತಿದ್ದರು: ಓ ಎಲ್ಲಕ್ಕಿಂತ ಹೆಚ್ಚಾಗಿ ನನ್ನನ್ನು ಪ್ರೀತಿಸುವವನೇ! ನೋಡು! ನಾನು ನಮ್ಮ ಪ್ರಾಮಾಣಿಕ ದಾಸರ ಹೃದಯದಲ್ಲಿ ನಿನ್ನ ಮೇಲಿನ ಪ್ರೀತಿಯಿಂದ ತುಂಬಿದ್ದೇವೆ, ನಿಧನರಾದ ನಂತರವೂ ನಿನ್ನ ಆಲೋಚನೆಗಳು ಅವರನ್ನು ಕಾಡುತ್ತವೆ. ಮತ್ತು ಯುದ್ಧಭೂಮಿಯಲ್ಲಿ ನಿನ್ನನ್ನು ಏಕಾಂಗಿಯಾಗಿ ಬಿಟ್ಟು ಹೋಗಲು ಎಷ್ಟರ ಮಟ್ಟಿಗೆ ದುಃಖಿತರಾದರು. ಅವರು ನಿಮ್ಮ ಬದಲು ಸ್ವರ್ಗದ ಆಸೆಯನ್ನು ಹೊಂದಿರಲಿಲ್ಲ. ಅವರ ಸ್ವರ್ಗವು ಹರಿತವಾದ ಕತ್ತಿಗಳಿಂದ ಪದೇ ಪದೇ ಕತ್ತರಿಸಲ್ಪಡುವುದಾಗಿತ್ತು, ಆದರೆ ನಿಮ್ಮೊಂದಿಗೆ ಇರಲಿ, ಮತ್ತು ನಿಮ್ಮೊಂದಿಗೆ ಇರಲಿ, ಮತ್ತು ನಿಮ್ಮೊಂದಿಗೆ ಇರಲೀ ಎಂದಾಗಿತ್ತು." (ಖುತ್ಬಾತ್ ತಾಹಿರ್, (ಖಿಲಾಫತ್ ಮೊದಲು ಜಲ್ಸ ಸಾಲಾನದ ಭಾಷಣಗಳು) 1979 ರ ಜಲ್ಸ ಸಾಲಾನದ ಭಾಷಣಗಳು, ಪುಟ-349,350)

ಈ ಪ್ರಸ್ತಾಪ ಮುಂದುವರೆಯುವುದು, ಇನ್‌ಶಾಅಲ್ಲಾಹ್.

ಮಧ್ಯಪ್ರಾಚ್ಯ ರಾಜ್ಯಗಳು ಮತ್ತು ಲೋಕದ ಅವಸ್ಥೆಗಳಿಗಾಗಿಯೂ ಪ್ರಾರ್ಥನೆಗಳನ್ನು ಮಾಡುತ್ತಿರಿ. ಸ್ಥಿತಿಗತಿಗಳು ಹದಗೆಡುತ್ತಾ ಹೋಗುತ್ತಿವೆ. ಇರಾನಿನ ಮೇಲೂ ದಾಳಿ ನಡೆಸುವ ಶಂಕೆಯಿದೆ. ಹಾಗಾದರೆ ಯುದ್ಧ ಇನ್ನಷ್ಟು ಹರಡುವುದು. ಅಲ್ಲಾಹನು ಕೃಪೆದೋರಲಿ. ಯಮನಿನಲ್ಲಿ ಬಹುತೇಕ ಕೈದಿಗಳನ್ನು ಬಿಡುಗಡೆಗೊಳಿಸಲಾಗಿದೆ ಎಂದು ನಿನ್ನೆ ವಾರ್ತೆ ಬಂದಿತ್ತು. ಉಳಿದಿರುವವರು ಬಿಡುಗಡೆ ಹೊಂದಲಿಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಆಡಳಿತಗಾರರ ಹೃದಯಗಳನ್ನು ಅವರಿಗಾಗಿ ಮೃದುಗೊಳಿಸಲಿ. ವಿಶೇಷವಾಗಿ ಅಲ್ಲಿನ ಲಜ್ನ ಸದರ್ ಸೆರೆಯಲ್ಲಿದ್ದಾರೆ. ಅವರು ಬೇಗನೇ ಬಿಡುಗಡೆಗೊಳ್ಳುವಂತೆ ಅಲ್ಲಾಹನು ಮಾಡಲಿ.

ನಮಾಝ್ ನಂತರ ನಾನು ಎರಡು ನಮಾಝೆ ಜನಾಝ ಗ್ಹಾಯಿಬ್‌ಗಳನ್ನು ನಿರ್ವಹಿಸುವೆನು. ಅವರಲ್ಲಿ ಮೊದಲ ಜನಾಝದ ಬಗ್ಗೆ ಸ್ವಲ್ಪ ಪ್ರಸ್ತಾಪಿಸುತ್ತೇನೆ. ಇದು ಇತ್ತೀಚೆಗೆ ನಿಧನರಾದ ಹಝ್ರತ್ ನವಾಬ್ ಅಬ್ದುಲ್ಲಾ ಖಾನ್ ಸಾಹಿಬ್ ಮತ್ತು ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಂ ಸಾಹಿಬ ಅವರ ಪುತ್ರರಾಗಿದ್ದ ಮುಕರ್ರಮ್ ಮುಸ್ತಫಾ ಅಹ್ಮದ್ ಖಾನ್ ಸಾಹಿಬ್ ಅವರದ್ದಾಗಿದೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಇವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಿರಿಯ ಮೊಮ್ಮಗರಾಗಿದ್ದರು. ಕಿರಿಯ ಪುತ್ರಿ ಅಮತುಲ್ ಹಫೀಝ್ ಬೇಗಮ್ ಸಾಹಿಬ(ರ) ರವರ ಕಿರಿಯ ಪುತ್ರ ಆಗಿದ್ದರು. ಹೀಗೆ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಿರಿಯ ಮೊಮ್ಮಗರಾಗಿದ್ದರು. ಅಲ್ಲಾಹನ ಕೃಪೆಯಿಂದ ಅವರು ಮೂಸಿ ಆಗಿದ್ದರು. 1966 ರಲ್ಲಿ, ಸುಯಿ ನಾರ್ದನ್ ಗ್ಯಾಸ್ ಕಂಪನಿಯಲ್ಲಿ ಅವರು ಹಿರಿಯ ಜನರಲ್ ಮ್ಯಾನೇಜರ್ ಆಗಿ ಸೇರಿದರು ಮತ್ತು ನಂತರ ಅವರು ನಿವೃತ್ತಿಯ ನಂತರವೂ ಕಂಪನಿಯ ನಿರ್ದೇಶಕರಾದರು. 1974 ರಲ್ಲಿ, ಪರಿಸ್ಥಿತಿ ಕೆಟ್ಟದಾಗ, ಕಂಪನಿಯು ನಿಮ್ಮನ್ನು ಸಂಪೂರ್ಣವಾಗಿ ಪಕ್ಕಕ್ಕೆ ತಳ್ಳಿತು ಮತ್ತು ನಿಮಗೆ ಒಳ್ಳೆಯ, ಸರಿಯಾದ ಕೆಲಸವನ್ನು ನೀಡುತ್ತಿರಲಿಲ್ಲ. ಈ ಕುರಿತು ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್(ರಹ್) ಅವರನ್ನು ಸಮಾಲೋಚಿಸಿದಾಗ ಅವರು ಪರಿಸ್ಥಿತಿ ಸರಿಯಾಗುತ್ತದೆ, ಚಿಂತಿಸಬೇಡಿ, ಮತ್ತು ನೀವು ಅಲ್ಲಿಯೇ ಇರಬೇಕು ಎಂದು ಹೇಳಿದರು, ಮತ್ತು ನಂತರ, ಅಲ್ಲಾಹನು ಅವರಿಗೆ ಅನುಗ್ರಹಿಸಿದನು ಮತ್ತು ನಂತರ ಪರಿಸ್ಥಿತಿಗಳು ಅವರ ಪರವಾಗಿದ್ದವು.

ಅವರು ಬಡವರ ಬಗ್ಗೆ ತುಂಬಾ ಕಾಳಜಿ ವಹಿಸುತ್ತಿದ್ದರು. ಸಂಬಂಧಗಳನ್ನು ಉಳಿಸಿಕೊಳ್ಳುವವರಾಗಿದ್ದರು. ಅವರು ಎರಡು ಮದುವೆಗಳಾದರು. ಅವರ ಮೊದಲ ಮದುವೆ ನಡೆಯಿತು. ಅವರ ಪತ್ನಿ ನಿಧನ ಹೊಂದಿದಾಗ ಅವರು ಅವರ (ಮೊದಲ ಪತ್ನಿಯ) ಕಿರಿಯ ಸಹೋದರಿಯೊಂದಿಗೆ ವಿವಾಹವಾದರು. ಅವರ ಮೊದಲ ಪತ್ನಿಯ ಮಕ್ಕಳನ್ನು ಸ್ವಂತ ಮಕ್ಕಳಂತೆ ನೋಡಿಕೊಂಡರು ಮತ್ತು ಅವರು ತಮ್ಮ ಸಹೋದರಿಯರ ಸಲಹೆಯಿಂದ ಈ ಎರಡನೇ ವಿವಾಹ ಮಾಡಿಕೊಂಡರು. ಅವರ ಎರಡನೇ ಪತ್ನಿ ಬರೆಯುತ್ತಾರೆ: ಎರಡನೆಯ ಪತ್ನಿಯೂ ಮೊದಲ ಪತ್ನಿಯ ಸಹೋದರಿಯಾಗಿದ್ದು, ನಾನು ಹೇಳಿದಂತೆಯೇ ಅವರು ಮೊದಲು ವಿವಾಹವಾಗಿದ್ದರು ಆದರೆ ವಿಚ್ಛೇದನೆಯಾಗಿತ್ತು ಇಬ್ಬರು ಹೆಣ್ಣುಮಕ್ಕಳನ್ನು ಹೊಂದಿದ್ದರು. ಬಹಳ ಸಮಯದ ತನಕ ಅರು ಸ್ವತಃ ಆ ಹುಡುಗಿಯರನ್ನು ಬೆಳೆಸಿದರು, ಆದಾಗ್ಯೂ, ಅವರು ಮತ್ತೆ ವಿವಾಹವಾದರು. ಅವರು ಬರೆಯುತ್ತಾರೆ: ಮುಸ್ಲಿಮೇತರರೊಂದಿಗೆ ಉತ್ತಮ ಸಂಬಂಧ ಹೊಂದಿದ್ದರು. ಸಿಂಧ್‌ನಲ್ಲಿ ಹಿಂದೂ ಮಗುವಿತ್ತು. ಅವರು ಆತನ ಶಿಕ್ಷಣದ ವ್ಯಚ್ಚವನ್ನು ಬಾಧಿಸುತ್ತಿದ್ದರು ಮತ್ತು ಅವನಿಗೆ ಉತ್ತ ವಿದ್ಯಾಭ್ಯಾಸವನ್ನು ನೀಡಿದರು, ಆತನು ಅಸಿಸ್ಟೆಂಟ್ ಕಮಿಷನರ್ ಆದನು ಮತ್ತು ನನಗೆ ಈ ಸ್ಥಾನ ಮಾನವು ಮುಸ್ತಫಾ ಖಾನ್ ಸಾಹಿಬ್ ಅವರಿಂದ ಲಭಿಸಿದೆ ಎಂದು ಹೇಳುತ್ತಿದ್ದರು. ಆದಾಗ್ಯೂ, ಅದು ಅಲ್ಲಾಹನ ಕೃಪೆಯಾಗಿತ್ತು. ಅವರು ಬಡವರ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು. ಅವರು ತಮ್ಮ ತಂದೆಯಿಂದ

ವಂಶಪಾರಂಪರ್ಯವಾಗಿ ಬಂದ ನಾಸಿರಾಬಾದ್ ಜಮೀನಿನಲ್ಲಿ ಪೋಷಕರ ಹೆಸರಿನಲ್ಲಿ ಫಾರಮ್ ಕೂಡ ತೆರೆದಿದ್ದರು. ಜಮೀನುಗಳ ಜೊತೆಗೆ ಕ್ಲಿನಿಕ್ ಕೂಡ ನಿರ್ಮಿಸಲಾಯಿತು ಮತ್ತು ಅಲ್ಲಿ ನಿಯಮಿತವಾಗಿ ಉಚಿತ ವೈದ್ಯಕೀಯ ಶಿಬಿರಗಳನ್ನು ಸಹ ನಡೆಸಲಾಯಿತು. ಈ ವೈದ್ಯಕೀಯ ಶಿಬಿರಕ್ಕೆ ಡಾ.ಅಬ್ದುಲ್ ಮನ್ನಾನ್ ಸಾಹಿಬ್ ಶಹೀದ್ ಕೂಡ ಹೋಗುತ್ತಿದ್ದರು. ಕ್ಲಿನಿಕ್‌ಗಾಗಿ ಹೊರಗಿನಿಂದ ಯಾರ ನೆರವನ್ನೂ ಕೇಳಲಿಲ್ಲ. ಅವರು ತಮ್ಮ ಸ್ವಂತ ಮೂಲಗಳಿಂದ ಅದರ ಖರ್ಚುಗಳನ್ನು ಪೂರೈಸುತ್ತಿದ್ದರು. ಅವರೂ ಅತಿಯಾಗಿ ಆತಿಥ್ಯ ನೀಡುತ್ತಿದ್ದರು. ಅವರ ತಂದೆ, ಹಝ್ರತ್ ನವಾಬ್ ಅಬ್ದುಲ್ಲಾ ಖಾನ್ ಸಾಹಿಬ್ ಕೂಡ ತುಂಬಾ ಆತಿಥ್ಯವನ್ನು ಹೊಂದಿದ್ದರು. ಅವರಿಗೂ ಮಕ್ಕಳೆಂದರೆ ತುಂಬಾ ಪ್ರೀತಿ. ಪ್ರತಿಯೊಂದು ಸಂಬಂಧವನ್ನು ಚೆನ್ನಾಗಿ ನಿಭಾಯಿಸಿದ್ದಾರೆ. ಅವರ ಎರಡನೇ ಪತ್ನಿ ಬರೆದಿದ್ದಾರೆ. ಅವರು ತಮ್ಮ ಮಕ್ಕಳನ್ನು, ತಮ್ಮ ಎರಡನೇ ಪತ್ನಿಯ ಹೆಣ್ಣು ಮಕ್ಕಳನ್ನು ತನ್ನ ಸ್ವಂತ ಹೆಣ್ಣುಮಕ್ಕಳಂತೆ ನೋಡಿಕೊಂಡರು.

ಅವರ ಸೋದರಳಿಯ ಡಾ.ಖಾಲಿದ್ ತಸ್ಲೀಂ ಸಾಹಿಬ್ ಹೇಳುತ್ತಾರೆ: ಅವರು ತುಂಬಾ ಉಪಯುಕ್ತ ವ್ಯಕ್ತಿಯಾಗಿದ್ದರು. ಸುಯಿ ಅನಿಲ ಇಲಾಖೆಯಲ್ಲಿ ಉತ್ತಮ ಹುದ್ದೆಯನ್ನು ಹೊಂದಿದ್ದರು ಮತ್ತು ಯಾರಿಗೂ ಕೆಲಸ ನಿರಾಕರಿಸುತ್ತಿರಲಿಲ್ಲ. ಅವರು ವಿಶೇಷವಾಗಿ ಬಡವರ ಬಗ್ಗೆ ಕಾಳಜಿ ವಹಿಸಿದರು. ಮಿರ್ಝಾ ಹನೀಫ್ ಅಹ್ಮದ್ ಸಾಹೇಬರು ಒಮ್ಮೆ ಹೇಳಿದರು: ಅವರ ಬಳಿ ಯಾರಾದರು ಬಡವನು ಯಾವುದಾದರೂ ಕೆಲಸಕ್ಕೆ ಕಳುಹಿಸಿದರೆ ಅವರು ಖಂಡಿತವಾಗಿಯೂ ಅವರ ಕೆಲಸ ಮಾಡುತ್ತಾರೆ. ರಬ್ವಾದಲ್ಲಿ ಅನೇಕ ಬಡವರ ಮನೆಗಳಿಗೆ ಸೂಯಿ ಗ್ಯಾಸ್ ಅಳವಡಿಸುವಲ್ಲಿ ಅವರು ಸಾಕಷ್ಟು ಸಹಾಯ ಮಾಡಿದ್ದಾರೆ.

35 ವರ್ಷಗಳ ಹಿಂದೆ ಅವರಿಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿತ್ತು. ಮೇಜರ್ ಆಪರೇಷನ್ ಮಾಡಬೇಕಿತ್ತು. ಇದರಿಂದಾಗಿ ದಿನನಿತ್ಯದ ಬದುಕಿನಲ್ಲಿ ಸಾಕಷ್ಟು ಕಷ್ಟಗಳನ್ನು ಎದುರಿಸುತ್ತಿದ್ದರೂ ಆದರೆ ಅವರ ಮುಖ ಕಳೆಗುಂದಲಿಲ್ಲ ಹಾಗೂ ಆತಿಥ್ಯ, ಜನಸೇವೆಯಲ್ಲಿ ವ್ಯತ್ಯಯವಿರಲಿಲ್ಲ. ಅವರ ಸ್ನೇಹಿತರ ವಲಯವೂ ಬಹಳ ವಿಸ್ತಾರವಾಗಿತ್ತು. ಜಮಾಅತ್ ವಿರೋಧಿಗಳು ಕೂಡ ಅವರನ್ನು ತುಂಬಾ ಗೌರವಿಸುತ್ತಿದ್ದರು ಮತ್ತು ಅವರು ಹಿತಚಿಂತಕರಾಗಿದ್ದ ಕಾರಣ ಅವರನ್ನು ಭೇಟಿಯಾಗಿದ್ದರು. ಅವರು ಎಲ್ಲರಿಗೂ ದಯೆ ತೋರುತ್ತಿದ್ದರು. ಯಾರಿಂದಲೂ ಉಪಕಾರ ಮಾಡದೆ, ಪರರಿಗೆ ಒಲವು ತೋರಲು ಪ್ರಯತ್ನಿಸುತ್ತಿದ್ದರು, ಯಾರಾದರೂ ಸ್ವಲ್ಪ ಉಪಕಾರ ಮಾಡಿದರೆ ತುಂಬಾ ಕೃತಜ್ಞತೆ ಸಲ್ಲಿಸುತ್ತಿದ್ದರು.

ನಾನೂ ಕೂಡ ಅವರಲ್ಲಿ ಈ ಎಲ್ಲಾ ಗುಣಗಳನ್ನೂ ನೋಡಿದ್ದೇನೆ. ಬಡ ಕುಟುಂಬಗಳ ಬಗ್ಗೆ ಕಾಳಜಿ ವಹಿಸುವವರಾಗಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ ತಾಯಿಗೆ ಸೇವೆ ಸಲ್ಲಿಸಿದ ಪುತ್ರ ಆಗಿದ್ದರು. ಸಹೋದರ ಸಹೋದರಿಯರಲ್ಲಿ ಅತ್ಯಂತ ಕಿರಿಯರಾಗಿದ್ದರೂ, ಅವನು ಹಿರಿಯರಾದರು.

ಪಿತ್ರಾರ್ಜಿತ ಜಮೀನಿನ ಜಂಟಿ ನಿರ್ವಹಣೆಯನ್ನು ಅವರ ತಾಯಿ ಹಝ್ರತ್ ನವಾಬ್ ಅಮತುಲ್ ಹಫೀಝ್ ಬೇಗಂ ಸಾಹಿಬಾ ಅವರು ಅವರಿಗೆ ವಹಿಸಿದ್ದರು, ಆದ್ದರಿಂದ ಅವರು ಅದನ್ನು ಅತ್ಯಂತ ಉನ್ನತ ರೀತಿಯಲ್ಲಿ ನಿರ್ವಹಿಸಿದರು. ಅವರು ಅದರಲ್ಲಿ ಆಡಳಿತಾತ್ಮಕ ಕೆಲಸ ಮಾಡಿದರು ಮತ್ತು ಈ ಜಮೀನನ್ನು ಎಲ್ಲೋ ಎತ್ತರದಿಂದ ತೆಗೆದುಕೊಂಡರು. ಅದಕ್ಕೇ ಅವರ ಸಂಬಂಧಿಕರೂ ನಿಮ್ಮನ್ನು ತುಂಬಾ ನಂಬಿದ್ದರು. ಇದಲ್ಲದೇ ಅಲ್ಲಿನ ಬಡ ಕಾರ್ಮಿಕರ ಬಗ್ಗೆಯೂ ಹೆಚ್ಚಿನ ಕಾಳಜಿ ವಹಿಸಿದ್ದರು. ಹೇಗಾದರೂ, ತುಂಬಾ ಒಳ್ಳೆಯ ಪತಿ, ತುಂಬಾ ಒಳ್ಳೆಯ ಪುತ್ರ, ತುಂಬಾ ಒಳ್ಳೆಯ ತಂದೆ ಮತ್ತು ಸಹೋದರನಾಗಿದ್ದರು. ಅಲ್ಲಾಹನು ಅವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ.

ಎರಡನೇಯ ಜನಾಝ ದಿವಂಗತ ಡಾ. ಮೀರ್ ದಾವೂದ್ ಅಹ್ಮದ್ ಸಾಹಿಬ್ ಅವರದ್ದಾಗಿದೆ. ಅವರು ಅಮೇರಿಕದಲ್ಲಿದ್ದರು. ಅವರು ಇತ್ತೀಚಿನ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು ಡಾ. ಮೀರ್ ಮುಷ್ತಾಕ್ ಅಹ್ಮದ್ ಸಾಹಿಬ್ ಮತ್ತು ಬಲ್ಕಿಸ್ ಬೇಗಂ ಸಾಹಿಬ್ ಅವರ ಪುತ್ರ ಆಗಿದ್ದರು. ಅವರು ಹಝ್ರತ್ ಮಿಯಾಂ ಅಬ್ದುಲ್ ರಹೀಮ್ ಅಹ್ಮದ್ ಸಾಹಿಬ್ ಮತ್ತು ಸಾಹಿಬ್ಜಾದಿ ಅಮತುಲ್ ರಶೀದ್ ಬೇಗಂ ಸಾಹಿಬಾ ಅವರ ಪುತ್ರಿ ಮುಕರ್ರಾಮ ಅಮತುಲ್ ಬಸೀರ್ ಸಾಹಿಬಾ ಅವರನ್ನು ವಿವಾಹವಾದರು. ಹಝ್ರತ್ ಸಾಹಿಬ್ಜಾದಿ ಅಮತುಲ್ ರಶೀದ್ ಬೇಗಂ ಸಾಹಿಬ ಅವರು ಹಝ್ರತ್ ಮುಸ್ಲೆಹ್ ಮೌಊದ್(ರ) ಅವರ ಪುತ್ರಿಯಾಗಿದ್ದರು, ಹೀಗಾಗಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೊಮ್ಮಗ ಆದರು ಮತ್ತು ಇವರು ಮೊಮ್ಮಗಳು ಆದರು. ಸಾಹಿಬ್ಜಾದಿ ಅಮತುಲ್ ರಶೀದ್ ಸಾಹಿಬ ಅವರು ಹಝ್ರತ್ ಹಕೀಮ್ ಮೌಲ್ವಿ ನೂರುದ್ದೀನ್ ಸಾಹಿಬ್(ರ) ಖಲೀಫತುಲ್ ಮಸೀಹ್ ಅವ್ವಲ್ ಅವರ ಮೊಮ್ಮಗಳಾಗಿದ್ದರು.

ಡಾ. ದಾವೂದ್ ಸಾಹಿಬ್ ಅವರು ಲಾಹೋರ್‌ನ ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದಿಂದ ಪದವಿ ಪಡೆದರು. ನಂತರ ಅಮೇರಿಕಕ್ಕೆ ಹೋದರು. ಅಲ್ಲಿಂದ ಪಿಎಚ್.ಡಿ. ನಂತರ ಅವರು ವಿಶ್ವ ಬ್ಯಾಂಕ್‌ನಲ್ಲಿ ಕೆಲಸ ಮಾಡಿದರು. 35 ವರ್ಷಗಳ ಕಾಲ ಹಿರಿಯ ಅಭಿವೃದ್ಧಿ ವೃತ್ತಿಪರರಾಗಿ ಮತ್ತು ಅತಿ ಹೆಚ್ಚಿನ ಸಾಮರ್ಥ್ಯದ ಪ್ರಾಕ್ಟೀಷನರ್ ಆಗಿ ಸೇವೆ ಸಲ್ಲಿಸಿದ್ದಾರೆ. ನೀವು ವಿವಿಧ ದೇಶಗಳಲ್ಲಿ, ವಿಶೇಷವಾಗಿ ಏಷ್ಯಾದಲ್ಲಿ ದೊಡ್ಡ ಪ್ರಮಾಣದ ಅಂತರಾಷ್ಟ್ರೀಯ ಬೆಳವಣಿಗೆಗಳು ಮತ್ತು ಅಭಿವೃದ್ಧಿ ಯೋಜನೆಗಳಲ್ಲಿ ಕೆಲಸ ಮಾಡಿದ್ದಾರೆ. ಅವರು ಅಮೇರಿಕದ ಜಮಾಅತ್‌ನ ಆರಂಭಿಕ ಸದಸ್ಯರಲ್ಲಿ ಒಬ್ಬರಾಗಿದ್ದರು. 1970 ರ ದಶಕದಲ್ಲಿ, ಅವರು ಹಿರಿಯ ಅಧಿಕಾರಿಯಾಗಿದ್ದರೂ ಸಹ ಲಂಗರ್ ಖಾನದ ತಂಡದಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಇದಲ್ಲದೇ ಹಲವು ವರ್ಷಗಳ ಕಾಲ ಅಮೇರಿಕದ ರಾಷ್ಟ್ರೀಯ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಯಾವಾಗಲೂ ಹೆಚ್ಚಿನ ಉತ್ಸಾಹ ಮತ್ತು ಧಾರ್ಮಿಕ ಮನೋಭಾವದಿಂದ ಕೆಲಸ ಮಾಡಿದರು. ಅವರು ನಿರ್ಮಾಣದಲ್ಲಿ ಮತ್ತು ವಿಶೇಷವಾಗಿ ಬೈತ್-ಉರ್-ರೆಹಮಾನ್ ಮಸೀದಿಯ ವಿಸ್ತರಣೆಯಲ್ಲಿ ಬಹಳಷ್ಟು ಕೆಲಸ ಮಾಡಿದರು. ಒಳ್ಳೆ ಹುದ್ದೆಯಲ್ಲಿದ್ದರೂ ಜಮಾಅತಿನ ಸೇವೆಯನ್ನು ಅತ್ಯಂತ ವಿನಯದಿಂದ ನಿರ್ವಹಿಸಿದರು. ಚೀನಾದಲ್ಲಿಯೂ ಅವರು ಇದ್ದರು. ಪ್ರತಿಕೂಲ ಪರಿಸ್ಥಿತಿಗಳ ನಡುವೆಯೂ ಚೀನಾದಲ್ಲಿಯೂ ಇಸ್ಲಾಂ ಧರ್ಮದ ಸಂದೇಶವನ್ನು ಸಾರಲು ಪ್ರಯತ್ನಿಸುತ್ತಿದ್ದಾರೆ ಎಂದು ಅಂದಿನ ಮುಬಲ್ಲಿಗ್ ಸಾಹೇಬರು ನನಗೆ ಬರೆದರು. ಅವರು ತುಂಬಾ ವಿನಮ್ರ ಸ್ವಭಾವವನ್ನು ಹೊಂದಿದ್ದರು. ಅವರು ವಿನಮ್ರತೆ ಮತ್ತು ಲವಲವಿಕೆಯಿಂದ ಪ್ರತಿ ದೊಡ್ಡ ಮತ್ತು ಚಿಕ್ಕವರನ್ನು ಭೇಟಿಯಾಗುತ್ತಿದ್ದರು, ಅವರು ಸಾಧ್ಯವಿರುವ ಎಲ್ಲ ಆರ್ಥಿಕ ಸಹಾಯವನ್ನು ನೀಡಲು ಸಿದ್ಧರಾಗಿದ್ದರು. ಆತಿಥ್ಯ ಅವರ ವಿಶೇಷತೆಯಾಗಿತ್ತು. ತನ್ನ ಮತ್ತು ಇತರರ ಬಗ್ಗೆ ಸಹಾನುಭೂತಿ ವ್ಯತ್ಯಾಸವಿಲ್ಲದೆ ಇತ್ತು. ಮೃತರ ಮೇಲೆ ಅಲ್ಲಾಹನು ಕರುಣೆ ಮತ್ತು ಕ್ಷಮೆಯನ್ನು ನೀಡಲಿ. (ಅಲ್-ಫಜಲ್ ಇಂಟರ್‌ನ್ಯಾಶನಲ್ ಡೈಲಿ, ಮೇ 3, 2024, ಪುಟ 2-6)

...*...*...*...

### *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮುಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

### ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

# ಖುತ್‌ಬ ಜುಮುಅ

ಅಲ್ಲಾಹನ ಆಣೆ! ಯಾರ ವಶದಲ್ಲಿ ನನ್ನ ಪ್ರಾಣವಿದೆಯೋ, ಅವರು ಮದೀನದ ಮೇಲೆ ದಾಳಿ ಮಾಡಿದರೆ, ಅವರಿಗಾಗಿ ಕಲ್ಲುಗಳನ್ನು ಗುರುತಿಸಲಾಗಿದೆ, ಅವರ ಹೆಸರು ಮತ್ತು ಗುರುತು ಹಿಂದಿನಂತೆ ಮಳೆಯಿಂದ ಅಳಿಸಿಹೋಗುತ್ತದೆ.

ನೀನೂ ಸಂತಸದಿಂದಿರು ಮತ್ತು ಯುದ್ಧದಲ್ಲಿ ಶಹೀದ್ ಆದ ಇತರ ಎಲ್ಲ ಶಹೀದರ ಸಂಬಂಧಿಕರಿಗೆ ಹೀಗೆ ಸುವಾರ್ತೆ ತಿಳಿಸು: ಇಂದು ಶಹೀದ್ ಆದ ಎಲ್ಲರನ್ನು ಅಲ್ಲಾಹನು ಸ್ವರ್ಗದಲ್ಲಿ ಒಟ್ಟುಗೂಡಿಸಿರುವನು. ಅವರೆಲ್ಲರೂ ಹೀಗೆ ದುಆ ಮಾಡಿರುವರು: ಹೇ ಪ್ರಭು, ನಮ್ಮ ಸಂಬಂಧಿಕರ ಪರಿಪಾಲನೆ ಮಾಡು. (ಹದೀಸ್)

ಉಹುದ್ ಹಾಗೂ ಹಮ್‌ರಾಉಲ್ ಅಸದ್ ಯುದ್ಧಗಳ ಬೆಳಕಿನಲ್ಲಿ ಹಝ್ರತ್ ಪೈಗಂಬರ್(ಸ)ರವರ ಪವಿತ್ರ ಜೀವನಚರಿತ್ರೆಯ ವಿಶ್ವಾಸ ವರ್ಧಕ ಪ್ರಸ್ತಾವನೆ

ಮಧ್ಯಪ್ರಾಚ್ಯ ರಾಜ್ಯಗಳು ಮತ್ತು ಲೋಕದ ಅವಸ್ಥೆಗಳಿಗಾಗಿಯೂ ಪ್ರಾರ್ಥನೆಗಳನ್ನು ಮಾಡಲು ಮನವಿ. ಜಾಗತಿಕ ಯುದ್ಧಕ್ಕೆ ಎಣ್ಣೆ ಸುರಿಸಲು ಇನ್ನಷ್ಟು ಪ್ರಯತ್ನಿಸುತ್ತಿರುವ ಈ ಲೌಕಿಕ ನಾಯಕರಿಗೆ ಅಲ್ಲಾಹನು ಬುದ್ಧಿ ನೀಡಲಿ. ಮುಸ್ಲಿಂ ಸಮುದಾಯಕ್ಕೂ ಅಲ್ಲಾಹನು ಬುದ್ಧಿ ಮತ್ತು ವಿವೇಕ ನೀಡಲಿ. ಅವರು ಒಂದಾಗಿ ಎದುರಾಳಿಯನ್ನು ಸರಿಯಾಗಿ ಎದುರಿಸಲು ಮತ್ತು ವಿವೇಕಯುತವಾಗಿ ವರ್ತಿಸಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ.

ಮೌಲಾನಾ ಗುಲಾಮ್ ಅಹ್ಮದ್ ಸಾಹಿಬ್ ನಸೀಮ್ ಮುರಬ್ಬಿ ಸಿಲ್‌ಸಿಲಾ ಮತ್ತು ಡಾ॥ ಎಹ್ಸಾನುಲ್ಲಾಹ್ ಝಫರ್ ಸಾಹಿಬ್ ಮಾಜಿ ಅಮೀರ್ ಅಮೇರಿಕ, ಅವರಿಬ್ಬರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **19-04-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಉಹುದಿನ ಘಟನೆಗಳಿಗೆ ಸಂಬಂಧಪಟ್ಟು ಇನ್ನಷ್ಟು ಘಟನೆಗಳನ್ನು ಮುಂದಿರಿಸುತ್ತೇನೆ. ಅದರಿಂದ ಹಝ್ರತ್ ಪೈಗಂಬರ್(ಸ)ರ ಜೀವನದ ಸುಂದರವಾದ ಮಗ್ಗುಲುಗಳ ಇನ್ನಷ್ಟು ಅರಿವಾಗುತ್ತದೆ.

ಹಝ್ರತ್ ಜಾಬಿರ್ ಬಿನ್ ಅಬ್ದುಲ್ಲಾಹ್(ರ) ವರದಿ ಮಾಡುತ್ತಾರೆ: ನನ್ನ ತಂದೆ ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್(ರ) ನಿಧನರಾದಾಗ ಅವರ ಮೇಲೆ ಸಾಲದ ಹೊರೆಯಿತ್ತು. ಅವರ ಸಾಲದಲ್ಲಿ ಸ್ವಲ್ಪ ರಿಯಾಯಿತಿ ಮಾಡಲು ಸಾಲ ಕೊಟ್ಟವರೊಡನೆ ಮನವಿ ಮಾಡಲು ನಾನು ಹಝ್ರತ್ ಪೈಗಂಬರ್(ಸ)ರೊಡನೆ ವಿನಂತಿಸಿದೆ. ನನ್ನ ಈ ಬಯಕೆಯನ್ನು ಹಝ್ರತ್ ಪೈಗಂಬರ್(ಸ) ಸಾಲ ಕೊಟ್ಟವರ ಮುಂದಿರಿಸಿದರು. ಆದರೆ ಅವರು ಅದನ್ನು ಕಮ್ಮಿ ಮಾಡಲಿಲ್ಲ. ಆಗ ಹಝ್ರತ್ ಪೈಗಂಬರ್(ಸ) ನನ್ನೊಡನೆ ಹೇಳಿದರು: ಹೋಗು ನಿನ್ನ ಖರ್ಜೂರಗಳ ಪ್ರತಿಯೊಂದು ವಿಧವನ್ನು ಬೇರೆ ಬೇರೆ ಇರಿಸಿದ ನಂತರ ನನಗೆ ತಿಳಿಸು. ನಾನು ಹಾಗೆಯೇ ಮಾಡಿದೆ ಮತ್ತು ಹಝ್ರತ್ ಪೈಗಂಬರ್(ಸ)ರಿಗೆ ಸಂದೇಶ ತಲುಪಿಸಿದೆ. ಹಝ್ರತ್ ಪೈಗಂಬರ್(ಸ) ಬಂದು ಖರ್ಜೂರಗಳ ರಾಶಿಗಳ ನಡುವೆ ಕುಳಿತುಕೊಂಡರು ಮತ್ತು ಸಾಲ ಕೊಟ್ಟವರಿಗೆ ಖರ್ಜೂರಗಳನ್ನು ತೂಕ ಮಾಡಿಕೊಂಡು ಕೊಡಲು ಹೇಳಿದರು. ಹಾಗೆ ನಾನು ತೂಕ ಮಾಡಿಕೊಂಡು ಕೊಟ್ಟೆನು. ಹೀಗೆ ಅವರ ಸಾಲಗಳನ್ನು ತೀರಿಸಿದೆ. ಆದಾಗ್ಯೂ ನನ್ನ ಖರ್ಜೂರಗಳು ಬಾಕಿಯುಳಿದುವು. ಅವುಗಳಲ್ಲಿ ಯಾವುದೇ ಕೊರತೆ ಉಂಟಾಗಿಲ್ಲವೆಂದು ತೋರುತ್ತಿತ್ತು. (ಸಹೀಹ್ ಬುಖಾರಿ, ಕಿತಾಬುಲ್ ಬುಯೂ, ಹದೀಸ್-2127)

ಹಝ್ರತ್ ಪೈಗಂಬರ್(ಸ) ಉಹುದ್ ಹುತಾತ್ಮರಿಗಾಗಿ ಪ್ರಾರ್ಥಿಸಿದರು, ಓ ದೇವರೇ! ಉಹುದ್‌ನ ಹುತಾತ್ಮರ ಬದುಕುಳಿದವರಿಗೆ ಒಳ್ಳೆಯ ಪರಿಪಾಲಕನನ್ನು ದಯಪಾಲಿಸು. ಇದರ ವಿವರಗಳನ್ನು ವಿವರಿಸುತ್ತಾ ಹಝ್ರತ್ ಮುಸ್ಲೆಹ್ ಮೌಊದ್(ರ.ಅ) ರವರು ಹಝ್ರತ್ ಸಅದ್ ಬಿನ್ ಮುಆಧ್(ರ)ರ ವೃದ್ಧೆ ಮತ್ತು ದುರ್ಬಲ ತಾಯಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಇದ್ದ ಪ್ರೀತಿಯ ಕಾರಣದಿಂದ ಯುದ್ಧದಿಂದ ಮರಳುತ್ತಿದ್ದ ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸಲಿಕ್ಕಾಗಿ ಮದೀನದಿಂದ ಹೊರಟರು. ಅದರ ಬಗ್ಗೆ ನಾನು ಕಳೆದ ಖುತ್ಬದಲ್ಲಿ ವಿವರಿಸಿದ್ದೆ. ಹಝ್ರತ್ ಪೈಗಂಬರ್(ಸ) ತನ್ನ ಸವಾರಿ ಮೃಗವನ್ನು ನಿಲ್ಲಿಸಿ ಅವರ ಪುತ್ರನ ಶಹಾದತಿನ ಬಗ್ಗೆ ಸಂತಾಪ ಸೂಚಿಸಿದರು. ಇದನ್ನು ವಿವರಿಸಿದ ನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಈ ಘಟನೆಗಳ ಬಗ್ಗೆ ಚಿಂತಿಸಿರಿ. ಯಾರಿಗಾದರೂ ಕಷ್ಟತೆ ಉಂಟಾದರೆ ಅವರೊಂದಿಗೆ ಸಹಾನುಭೂತಿ ತೋರಿಸಬೇಕು ಎಂಬ ಚಿಂತೆ ಹಝ್ರತ್ ಪೈಗಂಬರ್(ಸ)ರಿಗೆ ಎಷ್ಟೊಂದು ಇತ್ತು ಎಂದು ನೋಡಿರಿ. ಸಂತಾಪ ಸೂಚಿಸಿದ ನಂತರ ಹಝ್ರತ್ ಪೈಗಂಬರ್(ಸ) ಆ ವೃದ್ಧ ಮಹಿಳೆಯೊಡನೆ ಹೇಳಿದರು: ನೀನೂ ಸಂತಸದಿಂದಿರು ಮತ್ತು ಯುದ್ಧದಲ್ಲಿ ಶಹೀದ್ ಆದ ಇತರ ಎಲ್ಲ ಶಹೀದರ ಸಂಬಂಧಿಕರಿಗೆ ಹೀಗೆ ಸುವಾರ್ತೆ ತಿಳಿಸು: ಇಂದು ಶಹೀದ್ ಆದ ಎಲ್ಲರನ್ನು ಅಲ್ಲಾಹನು ಸ್ವರ್ಗದಲ್ಲಿ ಒಟ್ಟುಗೂಡಿಸಿರುವನು. ಅವರೆಲ್ಲರೂ ಹೀಗೆ ದುಆ ಮಾಡಿರುವರು: ಹೇ ಪ್ರಭು, ನಮ್ಮ ಸಂಬಂಧಿಕರ ಪರಿಪಾಲನೆ ಮಾಡು.

ಅನಂತರ ಹಝ್ರತ್ ಪೈಗಂಬರ್(ಸ) ಸ್ವತಃವೂ ಹೀಗೆ ದುಆ ಮಾಡಿದರು: ಹೇ ಪ್ರಭು, ಉಹುದಿನ ಶಹೀದರ ಸಂಬಂಧಿಕರನ್ನು ಚೆನ್ನಾಗಿ ಪರಿಪಾಲನೆ ಮಾಡು.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಯಾವ ರೀತಿಯಲ್ಲಿ ಮದೀನದಲ್ಲಿ ಪ್ರವೇಶಿಸುವುದಕ್ಕೆ ಮುಂಚಿತವಾಗಿಯೇ ಉಹುದಿನ ಶಹೀದರ ಸಂಬಂಧಿಕರನ್ನು ಸಾಂತ್ವನಗೊಳಿಸಿದರು ಮತ್ತು ಸಹಾನುಭೂತಿ ತೋರಿಸಿದರು ಎಂದು ಇದರಿಂದ ಗೊತ್ತಾಗುತ್ತದೆ. ಹಝ್ರತ್ ಪೈಗಂಬರ್(ಸ) ಸ್ವತಃ ಗಾಯಗೊಂಡಿದ್ದರು, ಅವರ ನಿಕಟ ಸಂಬಂಧಿಕರು ಶಹೀದ್ ಆಗಿದ್ದರು ಮತ್ತು ಅವರ ಪ್ರಿಯ ಸಹಾಬಿಯರು ನಿಧನಗೊಂಡಿದ್ದರು. ಆದಾಗ್ಯೂ ಹಝ್ರತ್ ಪೈಗಂಬರ್(ಸ) ಹೆಜ್ಜೆ ಹೆಜ್ಜೆಗೂ ಮದೀನದ ಜನರನ್ನು ಸಮಾಧಾನಪಡಿಸುತ್ತಿದ್ದರು. ಹಝ್ರತ್ ಪೈಗಂಬರ್(ಸ)ರಿಗೆ ತಮ್ಮ ಕಷ್ಟತೆಯ ಅಲ್ಪ ಮಾತ್ರವೂ ಚಿಂತೆ ಇರಲಿಲ್ಲ. ಇಷ್ಟೆಲ್ಲ ಕಷ್ಟತೆಗಳ, ದುಃಖಗಳ ಮತ್ತು ವಿಪತ್ತುಗಳ ಸಮಯದಲ್ಲಿ ಇತರರೊಂದಿಗೆ ಸಹಾನುಭೂತಿ ತೋರಿಸಲು ಹಝ್ರತ್ ಪೈಗಂಬರ್(ಸ)ರಿಗೆ ಅಲ್ಲದೇ ಬೇರೆ ಯಾರಿಗೂ ಸಾಧ್ಯವಲ್ಲ. (ಮಸಾಐಬ್ ಕೆ ನೀಚೆ ಬರ್ಕತೋಂ ಕೆ ಮಖ್‌ಫೀ ಖಝಾನೆ ಹೊತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ-19, ಪುಟ-57-58)

ನಂತರ ಹಝ್ರತ್ ಪೈಗಂಬರ್(ಸ) ಅವರು ಹುತಾತ್ಮರ ವಿಧವೆಗೆ ಮಾಡಿದ ಮತ್ತೊಂದು ಪ್ರಾರ್ಥನೆಯ ಉಲ್ಲೇಖವಿದೆ. ಆ ಪ್ರಾರ್ಥನೆ ಹೀಗಿತ್ತು ನಾನು ಸರ್ವಶಕ್ತನಾದ ಅಲ್ಲಾಹನಲ್ಲಿ ಪ್ರಾರ್ಥಿಸುವುದೇನೆಂದರೆ ಅಲ್ಲಾಹನು ನಿಮಗೆ ನಿಮ್ಮ ಪತಿಗಿಂತ ಉತ್ತಮವಾದ ಪರಿಪಾಲನೆ ಮಾಡುವ ವ್ಯಕ್ತಿಯನ್ನು ಸೃಷ್ಟಿಸಲಿ. ಅದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಅವರು ವಿವರವಾಗಿ ಬರೆದಿದ್ದಾರೆ: "ಉಹದ್ ಯುದ್ಧವು ಹಝ್ರತ್

ಪೈಗಂಬರ್(ಸ) ಅವರಿಗೆ ಬಹಳ ತಾಳ್ಮೆಯ ಯುದ್ಧವಾಗಿತ್ತು. ಅವರ ಮೇಲೆ ಹಿಂದೆಂದೂ ಹತ್ಯೆಯ ಯತ್ನ ಮಾಡಲಿಲ್ಲ, ಮತ್ತು ಅಷ್ಟೇ ಅಲ್ಲ. ಉಹುದ್ ಯುದ್ಧದಲ್ಲಿ, ಅವರ(ಸ) ಮೇಲೆ ದಾಳಿ ಮಾಡಲಾಯಿತು. ದಾಳಿ ನಡೆಯಿತು ಮತ್ತು ಅವರ ಕೆಲವು ಹಲ್ಲುಗಳು ಸಹ ಮುರಿದುಹೋಯಿತು ಮತ್ತು ಅವರು ಗಾಯಗೊಂಡಿದ್ದಲ್ಲದೆ, ಅವರು ಪ್ರಜ್ಞಾಹೀನರಾಗಿದ್ದಾಗ ಶತ್ರುಗಳು ಅವರ ಮತ್ತು ಅವರ ಸಹಾಬರ ದೇಹಗಳನ್ನು ತುಳಿದು ಹೋದರು ಮತ್ತು ಇದು ಅವರ(ಸ) ಜೀವನದಲ್ಲಿ ಈ ರೀತಿಯ ಮೊದಲ ಉದಾಹರಣೆಯಾಗಿತ್ತು, ಆದರೆ ಈ ಯುದ್ಧದಲ್ಲೂ ಹಝ್ರತ್ ಪೈಗಂಬರ್(ಸ) ಎಷ್ಟು ಉನ್ನತವಾದ ಧೈರ್ಯ ಮತ್ತು ಉನ್ನತಮಟ್ಟದ ಸ್ವಭಾವಗುಣಗಳನ್ನು ತೋರಿಸಿದರು ಹಾಗೂ ಜನರೊಂದಿಗೆ ಸಹಾನುಭೂತಿ ತೋರಿಸಿದರು ಎಂಬುದನ್ನು ನಾವು ನೋಡುತ್ತೇವೆ. ಹಝ್ರತ್ ಪೈಗಂಬರ್(ಸ) ನೈತಿಕ ಗುಣಗಳ ಎಷ್ಟು ಉನ್ನತವಾದ ಪದವಿಯಲ್ಲಿದ್ದರು ಎಂದು ಈ ಯುದ್ಧದ ಸ್ಥಿತಿಗತಿಗಳಿಂದ ಗೊತ್ತಾಗುತ್ತದೆ. ಸಹಾಬಿಯರ ಅತುಲ್ಯವಾದ ತ್ಯಾಗಗಳ ಬಗ್ಗೆಯೂ ಈ ಯುದ್ಧದಿಂದ ತಿಳಿದುಬರುತ್ತದೆ. ಹಝ್ರತ್ ಪೈಗಂಬರ್(ಸ) ಶಹೀದ್ ಆಗಿರುವರು ಎಂಬ ಸುದ್ದಿ ಕೇಳಿ ಕಳವಳಗೊಂಡಿದ್ದ ಮದೀನದ ಮಹಿಳೆಯರು ಈಗ ಹಝ್ರತ್ ಪೈಗಂಬರ್(ಸ) ಆಗಮಿಸುತ್ತಿರುವ ವಾರ್ತೆ ಆಲಿಸಿಕೊಂಡು ಹಝ್ರತ್ ಪೈಗಂಬರ್(ಸ)ರನ್ನು ಸ್ವಾಗತಿಸಲು ಮದೀನದ ಹೊರಗೆ ಸ್ವಲ್ಪ ದೂರಕ್ಕೆ ಬಂದು ನಿಂತಿದ್ದರು. ಆ ಮಹಿಳೆಯರಲ್ಲಿ ಹಝ್ರತ್ ಪೈಗಂಬರ್(ಸ)ರ ಪತ್ನಿಯ ಸಹೋದರಿಯಾದ ಹಝ್ರತ್ ಝೈನಬ್ ಬಿನ್ತ್ ಜಹಶ್(ರ) ಕೂಡ ಇದ್ದರು. ಅವರ ಮೂರು ಆತ್ಮೀಯ ಸಂಬಂಧಿಕರು ಹುತಾತ್ಮರಾಗಿದ್ದರು."

ಈ ಘಟನೆಯನ್ನು ಅನ್ವರ್ ಉಲೂಮ್‌ನಲ್ಲಿ ಬರೆಯಲಾಗಿದೆ ಅಥವಾ ಬರಹಗಾರ ಬರೆದಿದ್ದಾರೆ ಅಥವಾ ನೀವು ಅದನ್ನು ಅದೇ ರೀತಿಯಲ್ಲಿ ನಿರೂಪಿಸಿದ್ದೀರಿ ಎಂದು ನಾನು ಇಲ್ಲಿ ವಿವರಿಸುತ್ತೇನೆ, ಆದರೆ ಹೆಸರಿನಲ್ಲಿ ಏನೋ ತಪ್ಪಾಗಿದೆ. ಹಝ್ರತ್ ಝೈನಬ್ ಬಿನ್ತ್ ಜಹಶ್(ರ) ಹಝ್ರತ್ ಪೈಗಂಬರ್(ಸ) ಅವರ ಧರ್ಮಪತ್ನಿಯಾಗಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಅವರ ಪತ್ನಿಯ ಸಹೋದರಿ ಹಝ್ರತ್ ಹಮ್ನಾ ಬಿನ್ತ್ ಜಹಶ್ ಆಗಿದ್ದರು ಅವರು ಹಝ್ರತ್ ಮುಸ್ಅಬ್ ಬಿನ್ ಉಮೈರ್(ರ) ಅವರ ಪತ್ನಿಯಾಗಿದ್ದರು. ಆದಾಗ್ಯೂ, ಹೆಸರಲ್ಲಿ ಎಲ್ಲಿ ತಪ್ಪಾಗಿದೆ ಅದನ್ನು ಮುಂದೆ ತಿದ್ದಿಕೊಳ್ಳುತ್ತೇನೆ, ಅವರ ನಿಜವಾದ ಹೆಸರು ಹಮ್ನಾ ಎಂದಾಗಿತ್ತು.

ಹಝ್ರತ್ ಪೈಗಂಬರ್(ಸ) ಅವರನ್ನು ಕಂಡಾಗ, **"ನಿಮ್ಮ ಸತ್ತವರಿಗಾಗಿ ದುಃಖಿಸಿ"** ಎಂದು ಹೇಳಿದರು. (ಇದು ಅರೇಬಿಕ್ ಭಾಷಾವೈಶಿಷ್ಟವಾಗಿದೆ, ಅಂದರೆ ನಿಮ್ಮ ಪ್ರೀತಿಪಾತ್ರರನ್ನು ಕೊಲ್ಲಲಾಗಿದೆ ಎಂದು ನಾನು ನಿಮಗೆ ತಿಳಿಸುತ್ತಿದ್ದೇನೆ.) ಆದ್ದರಿಂದ ಹಮ್ನಾ ಬಿನ್ತ್ ಜಹಶ್(ರ) ಹೇಳಿದರು, ಯಾ ರಸೂಲಲ್ಲಾಹ್(ಸ)!! ಯಾರ ಸಾವಿಗಾಗಿ ಪಶ್ಚಾತ್ತಾಪ ಪಡಬೇಕು? ಅವರು(ಸ) ಹೇಳಿದರು: ನಿಮ್ಮ ಚಿಕ್ಕಪ್ಪ ಹಂಝಾ(ರ) ಹುತಾತ್ಮರಾಗಿದ್ದಾರೆ. ಇದನ್ನು ಕೇಳಿದ ಹಝ್ರತ್ ಹಮ್ನಾ(ರ) ಅವರು **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಪಠಿಸಿದರು ಮತ್ತು ಹೇಳಿದರು ಅವರು ಎಷ್ಟು ಉತ್ತಮವಾದ ಮರಣವನ್ನು ಹೊಂದಿದ್ದಾರೆ ಸರ್ವಶಕ್ತನಾದ ಅಲ್ಲಾಹನು ಅವರ ಪದವಿಗಳನ್ನು ಹೆಚ್ಚಿಸಲಿ ಎಂದು ಹೇಳಿದರು. ತದನಂತರ ಹಝ್ರತ್ ಪೈಗಂಬರ್(ಸ) ಹೇಳಿದರು ಸರಿ, ನೀವು ನಿಮ್ಮಲ್ಲಿ ಇನ್ನೊಬ್ಬರು ಸತ್ತವರ ಬಗ್ಗೆ ವಿಷಾದ ವ್ಯಕ್ತಪಡಿಸಿಕೊಳ್ಳಿ, ಅದಕ್ಕೆ ಹಮ್ನಾ(ರ) ಹೇಳಿದರು, ಯಾ ರಸೂಲಲ್ಲಾಹ್(ಸ), ಯಾರದ್ದು? ಅವರು(ಸ) ಹೇಳಿದರು: ನಿಮ್ಮ ಸಹೋದರ ಅಬ್ದುಲ್ಲಾ ಬಿನ್ ಜಹಶ್(ರ) ಕೂಡ ಹುತಾತ್ಮರಾಗಿದ್ದಾರೆ. ಅದಕ್ಕೆ ಹಮ್ನಾ(ರ) **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಎಂದು ಪಠಿಸಿ ಅಲ್‌ಹಮ್ದುಲಿಲ್ಲಾಹ್! ಅವರು ಸಹ ಬಹಳ ಒಳ್ಳೆಯ ಮರಣವನ್ನು ಹೊಂದಿದ್ದಾರೆ ಎಂದು ಹೇಳಿದರು. ಅವರು(ಸ) ಮತ್ತೆ ಹೇಳಿದರು ಹಮ್ನಾ(ರ)! ನಿಮ್ಮ ಇನ್ನೋರ್ವ ಸತ್ತವರ ಬಗ್ಗೆ ವಿಷಾದ ವ್ಯಕ್ತಪಡಿಸಿ. ಅದಕ್ಕೆ ಹಮ್ನಾ(ರ) ಕೇಳಿದರು ಯಾ ರಸೂಲಲ್ಲಾಹ್(ಸ) ಅವರು ಯಾರು? ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಪತಿಯೂ ಸಹ ಹುತಾತ್ಮರಾಗಿದ್ದಾರೆ. ಅವರಿಗೆ ಕಣ್ಣೀರು ಉಕ್ಕಿ ಬಂತು ಮತ್ತು 'ಅಕಟಾ' ಎಂದು ಹೇಳಿದರು. ಇದನ್ನು ನೋಡಿ ಹಝ್ರತ್ ಪೈಗಂಬರ್(ಸ) ಹೇಳಿದರು: ಸ್ತ್ರೀಗೆ ತನ್ನ ಗಂಡನೊಂದಿಗೆ ಎಷ್ಟು ಆಳವಾದ ಸಂಬಂಧವಿರುತ್ತದೆ ಎಂದು ನೋಡಿರಿ. ಇಂತಹ ಸಮಯದಲ್ಲಿ ಸ್ತ್ರೀ ತನ್ನ ಪ್ರಿಯ ಮತ್ತು ರಕ್ತ ಸಂಬಂಧಿಕರನ್ನು ಮರೆತು ಬಿಡುತ್ತಾಳೆ. ಆದರೆ ಅವಳನ್ನು ಪ್ರೀತಿಸುವ ಗಂಡನ ನೆನಪು ಅವಳಿಗೆ ಇರುತ್ತದೆ. ಅನಂತರ ಹಝ್ರತ್ ಪೈಗಂಬರ್(ಸ) ಹಮ್‌ನರೊಡನೆ ಕೇಳಿದರು: ನಿನ್ನ ಪತಿಯ ನಿಧನದ ವಾರ್ತೆ ಕೇಳಿ ಅಕಟಾ ಎಂದು ನೀನೇಕೆ ಉದ್ಗರಿಸಿದೆ? ಆಗ ಅವರು ಹೇಳಿದರು: ಯಾ ರಸೂಲಲ್ಲಾಹ್, ನನಗೆ ಅವರ ಮಕ್ಕಳ ನೆನಪು ಬಂತು. ಅವರನ್ನು ಇನ್ನು ಯಾರು ನೋಡುವರು ಎಂದು ನಾನು ಯೋಚಿಸಿದೆ.

ಹಝ್ರತ್ ಪೈಗಂಬರ್(ಸ) ಹೇಳಿದರು: ಅವರನ್ನು ನಿನ್ನ ಪತಿಗಿಂತಲೂ ಮಿಗಿಲಾಗಿ ಪರಿಪಾಲಿಸುವ ಯಾರನ್ನಾದರು ನೀಡಲು ನಾನು ಅಲ್ಲಾಹನಲ್ಲಿ ದುಆ ಮಾಡುತ್ತೇನೆ.

ಈ ಪ್ರಾರ್ಥನೆಯ ಫಲಿತಾಂಶ ಏನಾಯಿತು ಎಂದರೆ, ನಂತರ ಹಝ್ರತ್ ಹಮ್‌ನ(ರ)ರ ಮದುವೆ ಹಝ್ರತ್ ತಲ್‌ಹ(ರ)ರೊಡನೆ ಆಯಿತು. ಅವರಿಗೆ ಮುಹಮ್ಮದ್ ಬಿನ್ ತಲ್‌ಹ ಎಂಬ ಪುತ್ರ ಜನಿಸಿತು. ಆದರೆ ಚರಿತ್ರೆಗಳಲ್ಲಿ ಪ್ರಸ್ತಾಪಿಸಿರುವುದೇನೆಂದರೆ, ಹಝ್ರತ್ ಹಮ್‌ನರ ಮುಂಚಿನ ಮಕ್ಕಳನ್ನು ಪ್ರೀತಿಸುವಷ್ಟು ಹಝ್ರತ್ ತಲ್‌ಹ(ರ) ತನ್ನ ಮಗನಾದ ಮುಹಮ್ಮದ್‌ರನ್ನು ಪ್ರೀತಿಸುತ್ತಿರಲಿಲ್ಲ. ಬೇರೊಬ್ಬರ ಮಕ್ಕಳನ್ನು ಇಷ್ಟು ಪ್ರೀತಿಯಿಂದ ಪರಿಪಾಲಿಸುವುದರಲ್ಲಿ ತಲ್‌ಹರಿಗಿಂತ ಮೇಲು ಯಾರೂ ಇಲ್ಲ ಎಂದು ಜನರು ಹೇಳುತ್ತಿದ್ದರು. (ಮಸಾಎಬ್ ಕೆ ನೀಚೆ ಬರ್ಕತೊಂ ಕೆ ಖಝಾನೆ ಮಖ್ಫೀ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–55–57) (ಅಸದುಲ್‌ಗ್ಹಾಬ, ಸಂಪುಟ–7, ಪುಟ–71, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಇದೇ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಒಬ್ಬ ಮಹಿಳೆಗೆ ತನ್ನನ್ನು ಪ್ರೀತಿಸುವ ಪತಿಯೊಂದಿಗೆ ಎಷ್ಟು ಆಳವಾದ ಸಂಬಂಧವಿರುತ್ತದೆ ಎಂದು ನೋಡಿರಿ. ಪುರುಷರು ತನ್ನ ಪತ್ನಿಯರೊಂದಿಗೆ ಉತ್ತಮವಾಗಿ ವರ್ತಿಸಬೇಕು ಮತ್ತು ಸಣ್ಣ ಸಣ್ಣ ಸಂಗತಿಗಳಿಗಾಗಿ ಅವರನ್ನು ಹೊಡೆಯಲು ಬಡಿಯಲು ಹೋಗಬಾರದು ಎಂದಾಗಿತ್ತು ಹಝ್ರತ್ ಪೈಗಂಬರ್(ಸ)ರ ಮಾತಿನ ಉದ್ದೇಶ. ಮಹಿಳೆಯರು ತಮ್ಮ ಪ್ರಿಯರನ್ನು ಮತ್ತು ನಿಕಟ ಸಂಬಂಧಿಕರನ್ನು ಬಿಟ್ಟು ತಮ್ಮ ಪತಿಯರೊಂದಿಗೆ ವಾಸಿಸುತ್ತಿರುವಾಗ, ಅವರನ್ನು ಗೌರವಿಸುವುದೇ ನ್ಯಾಯವಾದ ಸಂಗತಿಯಾಗಿದೆ. ಸಣ್ಣ ಸಣ್ಣ ಮಾತುಗಳಿಗಾಗಿ ಅವರೊಡನೆ ಜಗಳ ಮಾಡಬಾರದು. ಹಝ್ರತ್ ಪೈಗಂಬರ್(ಸ) ಅವರ ಈ ಉದ್ದೇಶದಿಂದ ಒಂದೆಡೆ, ಹಮ್ನಾ ಬಿಂತ್ ಜಹಶ್(ರ) ಅವರಿಗೆ ಸಾಂತ್ವಾನವಾಗಿತ್ತು ಮತ್ತೊಂದೆಡೆ ಹಝ್ರತ್ ಪೈಗಂಬರ್(ಸ) ಅವರು ಮಹಿಳೆಯರೊಂದಿಗೆ ಉತ್ತಮ ನಡವಳಿಕೆ ಹೊಂಗಬೇಕುವಂತೆ ಸಲಹೆ ನೀಡಿದರು." (ಮಸಾಎಬ್ ಕೆ ನೀಚೆ ಬರ್ಕತೊಂ ಕೆ ಖಝಾನೆ ಮಖ್ಫಿ ಖಝಾನೆ ಹೊತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–60) ಹಝ್ರತ್ ಪೈಗಂಬರ್(ಸ)ರ ಪ್ರತಿಯೊಂದು ವಾತಿನಲ್ಲಿ ಪಾಠವಿರುತ್ತದೆ. ಮನುಷ್ಯನು ಗಮನವಿಟ್ಟು ಆಲಿಸಿದರೆ ಮತ್ತು ಯೋಚಿಸಿದರೆ ಗೊತ್ತಾಗುವುದೇನೆಂದರೆ, ಹಝ್ರತ್ ಪೈಗಂಬರ್(ಸ)ರ ಮಾತು ಕೇವಲ ಆ ವ್ಯಕ್ತಿಗೆ ಮಾತ್ರವಾಗಿರುವುದಿಲ್ಲ. ಬದಲಾಗಿ ಪ್ರತಿಯೊಬ್ಬರಿಗೂ ಒಂದು ಉಪದೇಶವಾಗಿರುತ್ತದೆ.

ಮತ್ತೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಜೀವನದ ಮತ್ತೊಂದು ಮಗ್ಗುಲು ಏನೆಂದರೆ ಅವರು ಇತರರ ಭಾವನೆಗಳ ಬಗ್ಗೆ ಎಷ್ಟು ಗೌರವವನ್ನು ಹೊಂದಿದ್ದರು ಎಂದಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ) ಮದೀನಕ್ಕೆ ಪ್ರವೇಶಿಸಿದಾಗ, ಶಹೀದ್ ಆದ ವ್ಯಕ್ತಿಗಳ ಬಗ್ಗೆ ಅವರ ಬಂಧುಗಳಾದ ಮಹಿಳೆಯರಿಗೆ ವಾರ್ತೆಗಳು ತಲುಪಿದ್ದುವು. ಹೀಗೆ ಅವರು ಅಳಲಾರಂಭಿಸಿದರು. ಮಹಿಳೆಯರು ಅಳುತ್ತಿರುವುದನ್ನು ಹಝ್ರತ್ ಪೈಗಂಬರ್(ಸ) ಕೇಳಿದಾಗ ಮುಸ್ಲಿಮರ ನೋವಿನ ಬಗ್ಗೆ ಚಿಂತಿಸಿ ಅವರಿಗೆ ಕಣ್ಣೀರು ಬಂತು ಮತ್ತು ಹೀಗೆ ಹೇಳಿದರು: **ಲಾಕಿನ್ ಹಂಝತ ಫಲಾ ಬವಾಕಿಯಾ ಲಹೂ** ನನ್ನ ದೊಡ್ಡಪ್ಪ ಮತ್ತು ಮಲ ಸಹೋದರ ಹಂಝಾ(ರ) ಕೂಡ ಶಹೀದ್ ಆಗಿರುವರು. ಆದರೆ ಅವರ ಬಗ್ಗೆ ಸಂತಾಪ ಸೂಚಿಸಲು ಯಾರೂ ಇಲ್ಲವೇ? ಈ ಮಾತು ಕೇಳಿ ಹಝ್ರತ್ ಪೈಗಂಬರ್(ಸ)ರ ಭಾವನೆಗಳನ್ನು ಈಡೇರಿಸಲಿಕ್ಕಾಗಿ ಹಂಬಲಿಸುತ್ತಿದ್ದ ಸಹಾಬಿಯರು ತಮ್ಮ ಮನೆಗಳಿಗೆ ಓಡಿ ಹೋಗಿ ತಮ್ಮ ಮಹಿಳೆಯರೊಡನೆ ಹೀಗೆ ಹೇಳಿದರು: ಸಾಕು, ಈಗ ನೀವು ನಿಮ್ಮ ಸಂಬಂಧಿಕರಿಗಾಗಿ ಅಳುವುದನ್ನು ನಿಲ್ಲಿಸಿರಿ. ಹಝ್ರತ್ ಪೈಗಂಬರ್(ಸ)ರ ಮನೆಗೆ ಹೋಗಿ ಹಂಝಾ(ರ)ರಿಗಾಗಿ ವಿಲಾಪಿಸಿರಿ. ಅಷ್ಟರಲ್ಲಿ ಯುದ್ಧದಿಂದ ಮರಳಿದ ನಂತರ ಆಯಾಸಗೊಂಡು ಆರಾಮ ಮಾಡುತ್ತಿದ್ದ ಹಝ್ರತ್ ಪೈಗಂಬರ್(ಸ)ರನ್ನು ರಾತ್ರಿ ಮೊದಲಿನ ಭಾಗ ದಾಟಿ ಹೋದ ನಂತರ ಹಝ್ರತ್ ಬಿಲಾಲ್(ರ) ಇಶಾ ನಮಾಝಿಗಾಗಿ ಎಚ್ಚರಗೊಳಿಸಿದರು. ಹಝ್ರತ್ ಪೈಗಂಬರ್(ಸ) ಎಚ್ಚರಗೊಂಡಾಗ, ಮಹಿಳೆಯರು ಹಝ್ರತ್

ಪೈಗಂಬರ್(ಸ)ರ ಮನೆಯಲ್ಲಿ ಆಗಲೂ ಹಝ್ರತ್ ಹಂಝ(ರ)ರಿಗಾಗಿ ವಿಲಾಪಿಸುತ್ತಿದ್ದರು. ಇದೇನಾಗುತ್ತಿದೆ ಎಂದು ಹಝ್ರತ್ ಪೈಗಂಬರ್(ಸ) ಕೇಳಿದರು. ಮದೀನದ ಸ್ತ್ರೀಯರು ಹಝ್ರತ್ ಹಂಝ(ರ)ರ ನಿಧನದ ಕಾರಣದಿಂದ ಅಳುತ್ತಿದ್ದಾರೆ ಎಂದು ಹೇಳಲಾಯಿತು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ಮದೀನದ ಮಹಿಳೆಯರ ಮೇಲೆ ಕೃಪೆದೋರಲಿ. ಅವರು ನನ್ನೊಡನೆ ಸಹಾನುಭೂತಿ ತೋರಿಸಿರುವರು. ಮದೀನದವರಿಗೆ ನನ್ನೊಡನೆ ಬಹಳ ಪ್ರೀತಿಯಿದೆ ಎಂದು ನನಗೆ ಮೊದಲೇ ಗೊತ್ತಿತ್ತು. ಅದರ ಜೊತೆಗೆ ಹೀಗೆಯೂ ಹೇಳಿದರು: ಈ ರೀತಿಯಲ್ಲಿ ಶೋಕಾಚರಣೆ ಮಾಡುವುದು ಅಲ್ಲಾಹನಿಗೆ ಅನಿಷ್ಟಕರವಾದ ಸಂಗತಿಯಾಗಿದೆ. ಸಹಾಬರವರು ಹೇಳಿದರು, ಯಾ ರಸೂಲಲ್ಲಾಹ್(ಸ)! ಇದು ನಮ್ಮ ಸಮುದಾಯದ ಅಭ್ಯಾಸವಾಗಿದೆ ಮತ್ತು ನಾವು ಹೀಗೆ ಅಳದಿದ್ದರೆ ನಮ್ಮ ಭಾವನೆಗಳು ತಣ್ಣಗಾಗುವುದಿಲ್ಲ. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಅಳುವುದನ್ನು ನಿಷೇಧಿಸುವುದಿಲ್ಲ, ಆದರೆ ಮಹಿಳೆಯರು ತಮ್ಮ ಮುಖಕ್ಕೆ ಹೊಡೆಯಬೇಡಿ ಎಂದು ಹೇಳಿರಿ. ಮತ್ತು ಅವರು ತಮ್ಮ ಕೂದಲನ್ನು ಕೀಳಬೇಡಿ." ಅವರು (ಮಹಿಳೆಯರು) ಶೋಕ ವ್ಯಕ್ತಪಡಿಸಿದಾಗ ತಮ್ಮ ಮುಖಕ್ಕೆ ಹೊಡೆದುಕೊಳ್ಳುತ್ತಿದ್ದರು ಮತ್ತು ತಮ್ಮ ಕೂದಲುಗಳನ್ನು ಕೀಳುತ್ತಿದ್ದರು. ಆದ್ದರಿಂದ ಅವರು ತಮ್ಮ ಕೂದಲುಗಳನ್ನು ಕೀಳದಿರಲಿ ಮತ್ತು ತಮ್ಮ ಮುಖಕ್ಕೆ ಹೊಡೆಯಬೇಡಿ ಮತ್ತು ತಮ್ಮ ಬಟ್ಟೆಗಳನ್ನು ಹರಿದುಕೊಳ್ಳಬೇಡಿ. ಅವರಿಗೆ ನೈಸರ್ಗಿಕವಾಗಿ ಅಳು ಬರುತ್ತಿದ್ದರೆ ಅಳಲಿ. ಈ ವಿಷಯಗಳಿಂದ ಹಝ್ರತ್ ಪೈಗಂಬರ್(ಸ) ಅವರ ನೈತಿಕ ಸ್ಥಿತಿ ಬಹಿರಂಗಪಡಿಸುತ್ತವೆ, ಅವರು(ಸ) ಗಾಯಗೊಂಡು ಮತ್ತು ನೋವಿನ ಹೊರತಾಗಿಯೂ ಇತರರ ಭಾವನೆಗಳನ್ನು ಭಾವನೆಗಳನ್ನು ಎಷ್ಟು ಗೌರವಿಸುತ್ತಾರೆ. (ಮಸಾಎಬ್ ಕೆ ನೀಚೆ ಬರ್ಕತೊಂ ಕೆ ಖಝಾನೆ ಮಖ್ಫೀ ಹೊತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–58–59)

ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಹೀಗೆ ವಿವರಿಸಿದರು: "ಮದೀನಾದ ಮಹಿಳೆಯರು ತಮ್ಮ ಮೃತರ ಮೇಲೆ ದುಃಖಿಸುತ್ತಿರುವುದನ್ನು ಮತ್ತು ವಿಲಾಪಿಸುತ್ತಿರುವುದನ್ನು ಕಂಡಾಗ, ಮುಹಜಿರೀನರು ಮತ್ತು ಹಝ್ರತ್ ಹಂಝಾ(ರ) ಅವರ ಸಂಬಂಧಿಕರು ಇಲ್ಲಿ ನಮಗೋಸ್ಕರ ಯಾರೂ ಇಲ್ಲ ಎಂದು ಭಾವಿಸಬಾರದು ಎಂದು ಹಝ್ರತ್ ಪೈಗಂಬರ್(ಸ) ಅವರು ಭಾವಿಸಿದರು. ಆದುದರಿಂದ ಅವರ ಭಾವನೆಯನ್ನು ಅರಿತುಕೊಂಡು "ಇವತ್ತು ಹಂಝಾ ಅವರಿಗಾಗಿ ಸಂತಾಪ ಸೂಚಿಸಲು ಯಾರೂ ಇಲ್ಲವೇ? ಎಂದು ಹಝ್ರತ್ ಪೈಗಂಬರ್(ಸ) ಹೇಳಿದಾಗ ಮದೀನದ ಮಹಿಳೆಯರು ಹಝ್ರತ್ ಹಂಝಾ(ರ) ಅವರನ್ನು ಶೋಕಿಸಲು ಪ್ರಾರಂಭಿಸಿದರು, ಆದ್ದರಿಂದ ಹಝ್ರತ್ ಪೈಗಂಬರ್(ಸ) ಈ ರೀತಿ ಶೋಕವನ್ನು ಅನುಮತಿಸಲಾಗುವುದಿಲ್ಲ ಎಂದು ನಿಷೇಧಿಸಿದರು. ಈ ಘಟನೆಯಿಂದ ಸ್ಪಷ್ಟವಾಗುವುದೇನೆಂದರೆ ಹಝ್ರತ್ ಹಂಝಾ(ರ) ಅವರಿಗೆ ಸಂತಾಪ ಸೂಚಿಸಬೇಕೆಂದು ಹಝ್ರತ್ ಪೈಗಂಬರ್(ಸ) ಭಾವಿಸಿದ್ದರೆ, ನಂತರ ಅದನ್ನು ಅವರು(ಸ) ನಿಷೇಧಿಸುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಹಂಝಾ(ರ) ಅವರ ನಿಧನದ ಬಗ್ಗೆ ಯಾರೂ ಅಳಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದಾಗಲೂ ಅವರ ಭಾವನೆ ಕೇವಲ ಸಾಂತ್ವಾನಗೊಳಿಸುವುದಾಗಿತ್ತು ಮತ್ತು ಅವರು(ಸ) ಶೋಕಾಚರಣೆ ಮಾಡುವರನ್ನು ನಿಷೇಧಿಸಿದಾಗಲೂ ಅವರ ಭಾವನೆಯು ಸಾಂತ್ವಾನಗೊಳಿಸುವುದೇ ಆಗಿತ್ತು. ಏಕೆಂದರೆ ಅವರು(ಸ) ಆ ಮಹಿಳೆಯರನ್ನು ಶೋಕಾಚರಣೆಯಿಂದ ತಡೆದರು ಮತ್ತು ಅದರೊಂದಿಗೆ ಅವರು ನನ್ನೊಂದಿಗೆ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ ಎಂದು ಹೇಳಿದರು ಮತ್ತು ಅವರು ಪುನಃ ಹೇಳಿದರು, ಅನ್ಸಾರ್‌ಗಳಿಗೆ ನನ್ನ ಬಗ್ಗೆ ಹೆಚ್ಚು ಸಹಾನುಭೂತಿ ಇದೆ ಎಂದು ನನಗೆ ಮೊದಲೇ ತಿಳಿದಿತ್ತು ಮತ್ತು ಹಝ್ರತ್ ಪೈಗಂಬರ್(ಸ) ಅವರು ಇದನ್ನು ಹೇಳಬೇಕಾದ ಉದ್ದೇಶವೇನೆಂದರೆ ಅವರು ಈ ರೀತಿ ಶೋಕಾಚರಣೆ ಮಾಡುವುದನ್ನು ನಿಷೇಧದಿಂದ ಮನನೊಂದಬಾರದು ಎಂದಾಗಿತ್ತು. ಹೀಗೆ ಹಝ್ರತ್ ಪೈಗಂಬರ್(ಸ)ರವರು ಅದನ್ನು ತಡೆದರು ಮತ್ತು ಅವರು ಕೃತಜ್ಞತೆಗಳನ್ನೂ ಕೂಡ ಅರ್ಪಿಸಿದರು. ಇಂತಹ ಸೂಕ್ಷ್ಮವಾದ ಸಮಯದಲ್ಲಿ ಎಷ್ಟು ವೈಭವಶಾಲಿ ಮತ್ತು ಮಹತ್ತಾದ ವಿಧಾನವನ್ನು ಹಝ್ರತ್ ಪೈಗಂಬರ್(ಸ) ಕೈಗೊಂಡರು ಎಂದು ನಮಗೆ ಕಂಡುಬರುತ್ತವೆ. (ಮಸಾಎಬ್ ಕೆ ನೀಚೆ ಬರ್ಕತೊಂ ಕೆ ಖಝಾನೆ ಮಖ್ಫೀ ಹೊತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–60–61)

ಇತಿಹಾಸದ ಪುಸ್ತಕಗಳಲ್ಲಿ, ಉಹುದ್ ಯುದ್ಧದಲ್ಲಿ ಸಹಾಬೀಯರ ಖಡ್ಗಗಳು ಕರ್ತವ್ಯ ನಿರ್ವಹಿಸಿದ ಉಲ್ಲೇಖವು ಈ ಕೆಳಗಿನಂತಿದೆ:

"ಹಝ್ರತ್ ಪೈಗಂಬರ್(ಸ) ಮನೆಗೆ ಪ್ರವೇಶಿಸಿದಾಗ ತನ್ನ ಪುತ್ರಿಯಾದ ಫಾತಿಮ(ರ)ರಿಗೆ ತನ್ನ ಖಡ್ಗವನ್ನು ನೀಡುತ್ತಾ ಹೀಗೆ ಹೇಳಿದರು: **ಇಗ್‌ಸಿಲೀ ಅನ್ ಹಾಝಾ ದಮಹೂ ಯಾ ಬುನೈಯತು ಫವಲ್ಲಾಹಿ ಲಖದ್ ಸದಖನೀಲ್ ಯೌಮ–** ಮಗಳೇ, ಈ ಖಡ್ಗದಲ್ಲಿ ಅಂಟಿಕೊಂಡಿರುವ ರಕ್ತವನ್ನು ತೊಳೆದುಹಾಕು. ಅಲ್ಲಾಹನಾಣೆ, ಇಂದು ಈ ಖಡ್ಗ ತನ್ನ ಕರ್ತವ್ಯವನ್ನು ನಿರ್ವಹಿಸಿದೆ. ಅನಂತರ ಹಝ್ರತ್ ಅಲಿ(ರ) ಸಹ ತನ್ನ ಖಡ್ಗವನ್ನು ನೀಡುತ್ತಾ ಹಝ್ರತ್ ಪೈಗಂಬರ್(ಸ) ಹೇಳಿದ ಅದೇ ಮಾತುಗಳನ್ನು ಹೇಳಿದರು. ಇದನ್ನು ಆಲಿಸಿ ಹಝ್ರತ್ ಪೈಗಂಬರ್(ಸ) ಹೇಳಿದರು: **ಲಇನ್ ಕುನ್‌ತ ಸದಖ್ತಲ್ ಯೌಮಲ್ ಖಿತಾಲ ಲಖದ್ ಸದಖ ಮಅಕ ಸಹ್ಲುಬ್ನು ಹುನೈಫಿನ್ ವ ಅಬುದುಝಾನತ–** ಇಂದು ನೀವು ಯುದ್ಧದಲ್ಲಿ ಶೌರ್ಯವನ್ನು ತೊರಸಿದ್ದರೆ ನಿಮ್ಮೊಂದಿಗೆ ಸಹಲ್ ಬಿನ್ ಹುನೈಫ್ ಮತ್ತು ಅಬೂದುಜಾನ ಕೂಡ ಬಹಳ ಉತ್ತಮವಾದ ಶೌರ್ಯವನ್ನು ತೋರಿಸಿದರು."

ಒಂದು ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ಖಡ್ಗ ಚಲಾಯಿಸುವಲ್ಲಿ ಶೌರ್ಯವನ್ನು ತೋರಿಸಿದ್ದರೆ ನಿಮ್ಮೊಂದಿಗೆ ಸಹಲ್ ಬಿನ್ ಹನೀಫ್(ರ), ಅಬೂದಜಾನ(ರ), ಆಸಿಮ್ ಬಿನ್ ಸಾಬಿತ್(ರ) ಮತ್ತು ಹಾರಿಸ್ ಬಿನ್ ಸಿಮ್ಮಾ(ರ)ಸಹ ಉತ್ತಮವಾ ಶೌರ್ಯವನ್ನು ತೋರಿಸಿದ್ದಾರೆ. (ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ–7, ಪುಟ–62, ಬಝ್ಮ್ ಇಖ್ಬಾಲ್ ಲಾಹೋರ್)

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಇತಿಹಾಸದಲ್ಲಿ ಹೀಗೆ ಬರೆಯಲಾಗಿದೆ ಹಝ್ರತ್ ಅಲಿ(ರ) ರವರು ಉಹುದ್ ನಿಂದ ಹಿಂತಿರುಗಿ ಬಂದು ತಮ್ಮ ಖಡ್ಗವನ್ನು ಹಝ್ರತ್ ಫಾತಿಮಾ(ರ) ರವರಿಗೆ ನೀಡಿ ಅದನ್ನು ತೊಳೆಯಿರು ಈ ಖಡ್ಗ ಇಂದು ದೊಡ್ಡ ಕೆಲಸ ಮಾಡಿದೆ ಎಂದು ಹೇಳಿದರು. ಹಝ್ರತ್ ಪೈಗಂಬರ್(ಸ)ರವರು ಹಝ್ರತ್ ಅಲಿ(ರ) ಅವರ ಈ ಮಾತುಗಳನ್ನು ಆಲಿಸಿ ಹೇಳಿದರು: ಅಲೀ!! ನಿಮ್ಮ ಸ್ವಂತ ಖಡ್ಗ ಮಾತ್ರ ಕೆಲಸ ಮಾಡಲಿಲ್ಲ ಅದರೊಂದಿಗೆ ನಿಮ್ಮ ಅನೇಕ ಸಹೋದರರ ಕತ್ತಿಗಳು ತಮ್ಮ ಸಾರವನ್ನು ತೋರಿಸಿದೆ. ಹೀಗೆ ಹಝ್ರತ್ ಪೈಗಂಬರ್(ಸ)ರವರು ಆರು, ಏಳು ಸಹಾಬಿಗಳ ಹೆಸರನ್ನು ತೆಗೆದುಕೊಂಡು ಹೇಳಿದರು: ಅವರ ಖಡ್ಗಗಳು ನಿಮ್ಮ ಖಡ್ಗದಿಂದ ಕಡಿಮೆ ಇರಲಿಲ್ಲ. ಒಟ್ಟಿನಲ್ಲಿ, ಇತರ ಸಹಾಬಿಯರ ಮನನೋಯಿಸುವ ಯಾವುದೇ ಮಾತನ್ನು ತನ್ನ ಅಳಿಯ ಹೇಳುವುದನ್ನು ಕೂಡ ಹಝ್ರತ್ ಪೈಗಂಬರ್(ಸ) ಸಹಿಸಲಿಲ್ಲ. ಹಝ್ರತ್ ಪೈಗಂಬರ್(ಸ) ಅವರ ಸೂಕ್ಷ್ಮ ದೃಷ್ಟಿಯು ಸಣ್ಣ ವಿಷಯಗಳ ಮೇಲೂ ಇತ್ತು ಎಂದು ಅರಿವಾಗುತ್ತದೆ. ಮತ್ತು ಉಹುದ್ ಯುದ್ಧದ ಘಟನೆಯು ಶಾಶ್ವತ ಪರಿಣಾಮಗಳ ವಿಷಯದಲ್ಲಿ ಎಷ್ಟು ದೊಡ್ಡ ಘಟನೆಯಾಗಿತ್ತು, ಈ ಘಟನೆಯ ನಂತರ ಶತ್ರುಗಳು ಈಗ ಧೈರ್ಯಶಾಲಿಯಾಗುತ್ತಾರೆ ಅಥವಾ ಮುಂದೆ ಏನಾಗಬಹುದು ಎಂದು ಜನರು ತುಂಬಾ ಚಿಂತಿತರಾಗಿದ್ದರು. ಮತ್ತು ಮನುಷ್ಯ ಇಂತಹ ಸಂದಿಗ್ಧದ ಸಂದರ್ಭದಲ್ಲಿ ಸಣ್ಣ ಸಣ್ಣ ವಿಷಯಗಳಿಗೆ ಗಮನ ಕೊಡುವುದಿಲ್ಲ, ಆದರೆ ಹಝ್ರತ್ ಪೈಗಂಬರ್(ಸ)ರವರು ಎಲ್ಲರೊಂದಿಗೆ ಸಹಾನುಭೂತಿ ತೋರಿಸಿದರು ಮತ್ತು ಎಲ್ಲರಿಗೂ ಸಾಂತ್ವನ ನೀಡಿದರು."
(ಮಸಾಎಬ್ ಕೆ ನೀಚೆ ಬರ್ಕತೊಂ ಕೆ ಖಝಾನೆ ಮಖ್ಫೀ ಹೊತೆ ಹೈಂ, ಅನ್ವಾರುಲ್ ಉಲೂಮ್, ಸಂಪುಟ–19, ಪುಟ–59–60)

ಉಹುದ್ ಯುದ್ಧದ ಘಟನೆಗಳು ಇಲ್ಲಿಗೆ ಮುಕ್ತಾಯಗೊಳ್ಳುತ್ತಿವೆ. ಹಮ್‌ರಾಉಲ್ ಅಸದ್ ಎಂಬ ಹೆಸರಿನ ಮತ್ತೊಂದು ಯುದ್ಧವಿದೆ. ಅದು ಹಿಜರೀ 3ರ ಶವ್ವಾಲ್ ತಿಂಗಳಲ್ಲಿ ನಡೆದಿತ್ತು. ಈ ಯುದ್ಧ ಸತ್ಯದಲ್ಲಿ ಉಹುದ್ ಯುದ್ಧದ ಭಾಗ ಮತ್ತು ಅನುಬಂಧವಾಗಿದೆ. ಅದರ ಫಲಿತಾಂಶದ ಆಧಾರದಲ್ಲಿ ಉಹುದ್ ಯುದ್ಧವನ್ನು ನಿಜವಾದ ಅರ್ಥದಲ್ಲಿ ಮುಸ್ಲಿಮರ ವಿಜಯವಾಗಿ ಗಣಿಸಲಾಗುತ್ತದೆ. (ದಾಎರಾ ಮುಆರಿಫ್, ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅ;ಲೈಹಿವ ಸಲ್ಲಮ್, ಸಂಪುಟ–7, ಪುಟ–119, ಬಝ್ಮ್ ಇಖ್ಬಾಲ್ ಲಾಹೋರ್)

ಹಮ್‌ರಾಉಲ್ ಅಸದ್ ಮದೀನಾದಿಂದ ಧುಲ್–ಹುಲೈಫಾಗೆ ಹೋಗುವ ಮಾರ್ಗದ ಎಡಭಾಗದಲ್ಲಿ ಮದೀನಾದಿಂದ ಎಂಟು ಮೈಲುಗಳಷ್ಟು ದೂರದಲ್ಲಿದೆ. (ಫರ್ಹಾಂಗ್ ಸೀರತ್, ಪುಟ–106 ಝೋವರ್ ಅಕಾಡೆಮಿ ಕರಾಚಿ) (ಮುಜಮುಲ್ ಬಲದಾನ್, ಡಾ. ಗುಲಾಮ್ ಜಿಲಾನಿ ಬಾರ್ಕ್, ಪುಟ–123, ಅಲ್–ಫೈಸಲ್ ಪಬ್ಲಿಷರ್ಸ್ ಮತ್ತು ಟ್ರೇಡರ್ಸ್ ಬುಕ್ಸ್ ಲಾಹೋರ್)

ಹಮ್‌ರಾಉಲ್ ಅಸದ್ ಯುದ್ಧಕ್ಕೆ ಕಾರಣವೇನು? ಇದರ ಬಗ್ಗೆ

ಹೀಗೆ ಬರೆಯಲಾಗಿದೆ: ಉಹದ್ ಯುದ್ಧದ ಕೊನೆಯಲ್ಲಿ ಹಝ್ರತ್ ಪೈಗಂಬರ್(ಸ) ಅವರು ಸಾಯಂಕಾಲ ಮದೀನಾಗೆ ಆಗಮಿಸಿದರು ಅವರು ಗಂಭೀರವಾಗಿ ಗಾಯಗೊಂಡಿದ್ದರೂ ಸಹ ಮಗ್ರಿಬ್ ನಮಾಝ್ ಅನ್ನು ಸಹಾಬರವರ ನೆರವಿನಿಂದ ಮಸೀದಿಗೆ ಹೋಗಿ ನಮಾಝ್ ನಿರ್ವಹಿಸಿದರು ಅದೇ ರೀತಿ ಇಶಾ ನಮಾಝ್ ಕೂಡ ಮಸೀದಿಯಲ್ಲಿ ನಿರ್ವಹಿಸಿದರು. ಇಶಾ ನಮಾಝ್ ನಂತರ, ಹಝ್ರತ್ ಪೈಗಂಬರ್(ಸ)ರು ತಮ್ಮ ಮನೆಗೆ ತೆರಳಿದರು, ಆದರೆ ಅಬುಸುಫ್ಯಾನ್ ತನ್ನ ಸೈನ್ಯದೊಂದಿಗೆ ಮದೀನದ ಮೇಲೆ ದಾಳಿ ನಡೆಸಲು ಯೋಜಿಸಬಹುದೆಂಬ ಯೋಚನೆಯಿಂದ ಅವರು ಇಡೀ ರಾತ್ರಿ ಎಚ್ಚರದಿಂದ ಕಳೆದರು ಎಂದು ತಿಳಿದುಬಂದಿದೆ. ಈ ಕಾರಣಕ್ಕಾಗಿ, ಮದೀನಾದಲ್ಲಿ ಒಂದು ರೀತಿಯ ತುರ್ತು ಪರಿಸ್ಥಿತಿ ಇತ್ತು ಮತ್ತು ಪ್ರವಾದಿವರ್ಯರ ಮನೆಯ ಹೊರಗೆ ನಿರಂತರ ಕಾವಲು ಇರಿಸಲಾಗಿತ್ತು. ಮತ್ತು ಹಝ್ರತ್ ಪೈಗಂಬರ್(ಸ) ಅಬು ಸುಫ್ಯಾನ್ ಮದೀನಾದ ಮೇಲೆ ದಾಳಿ ಮಾಡಲು ತಯಾರಿ ನಡೆಸುತ್ತಿದ್ದಾನೆಯೇ? ಅಥವಾ ಅವನ ಉದ್ದೇಶಗಳು ಏನೆಂಬುದನ್ನು ಸಹ ಗೊತ್ತು ಮಾಡಿಸಿದರು. ಅಬುಸುಫ್ಯಾನ್ ತನ್ನ ಸೈನ್ಯದೊಂದಿಗೆ ಮಕ್ಕಾದ ಕಡೆಗೆ ವೇಗವಾಗಿ ಚಲಿಸುತ್ತಿದ್ದಾನೆ ಎಂದು ಆರಂಭಿಕ ವರದಿಯಾಗಿದ್ದರೂ, ಹಝ್ರತ್ ಪೈಗಂಬರ್(ಸ) ಅದನ್ನು ನಿರ್ಲಕ್ಷಿಸಲಿಲ್ಲ. ಅಂತಿಮವಾಗಿ, ಹಝ್ರತ್ ಪೈಗಂಬರ್(ಸ)ರ ಯೋಚನೆಯು ಸರಿ ಎಂದು ಸಾಬೀತಾಯಿತು ಮತ್ತು ಅಬುಸುಫ್ಯಾನ್ ಮದೀನದ ಮೇಲೆ ದಾಳಿ ಮಾಡಲು ತನ್ನ ಸೈನ್ಯದೊಂದಿಗೆ ಬರಲು ಸಿದ್ಧನಾಗಿದ್ದಾನೆ ಎಂಬ ಮಾಹಿತಿಯನ್ನು ಪಡೆದಾಗ ರಾತ್ರಿ ಇನ್ನೂ ಮುಗಿದಿರಲಿಲ್ಲ. ಏನಾಯಿತೆಂದರೆ, ಮುಶ್ರಿಕೀನರು ಉಹದ್ ಕ್ಷೇತ್ರದಿಂದ ಹಿಂದಿರುಗುತ್ತಿರುವಾಗ ಅವರು ದಾರಿಯಲ್ಲಿ ಯಾರನ್ನು ಭೇಟಿಯಾದರು ಅವರಿಗೆ ಯುದ್ಧದ ಬಗ್ಗೆ ಸುದ್ದಿ ಲಭಿಸಿದಾಗ, ಅವರು ನೀವು ಮುಹಮ್ಮದ್(ಸ) ಅವರನ್ನು ವಧಿಸಲಿಲ್ಲ ಮತ್ತು ಮುಸ್ಲಿಮರ ಮಹಿಳೆಯರನ್ನು ಸಹ ಕರೆತಂದಿಲ್ಲ, ಅವರನ್ನು ಬಂಧಿಸಿ ಕೈದಿಗಳನ್ನಗಿ ಮಾಡಿ ತರಲಿಲ್ಲ ಮತ್ತು ನಿಮ್ಮೊಂದಿಗೆ ಯುದ್ಧ ಸಂಪತ್ತನ್ನು ಸಹ ತರಲಿಲ್ಲ ಮತ್ತೆ ನೀವು ಯಾವ ವಿಜಯದ ಬಗ್ಗೆ ಮಾತನಾಡುತ್ತಿದ್ದೀರ? ಎಂದು ಮೂದಲಿಸುತ್ತಿದ್ದರು. ಈ ಅಪಹಾಸ್ಯಗಳನ್ನು ಕೇಳಿದ ಈ ಸೈನ್ಯವು ಮದೀನಾದಿಂದ ಕೆಲವು ಎಪ್ಪತ್ನಾಲ್ಕು ಕಿಲೋಮೀಟರ್ ಅಥವಾ ಕೆಲವರ ಪ್ರಕಾರ ಐವತ್ತೈದು ಕಿಲೋಮೀಟರ್ ದೂರದಲ್ಲಿರುವ ರೂಹಾ ಎಂಬ ಸ್ಥಳವನ್ನು ತಲುಪಿತು ಮತ್ತು ಅವರು ತಂಗಿದಾಗ, ಅವರು ಪರಸ್ಪರ ಈ ವಿಷಯವು ಸರಿಯಾಗಿದೆ ನಾವು ಯಾವುದೇ ಖೈದಿಗಳನ್ನು ಬಂಧಿಸಲಿಲ್ಲ ಅಥವಾ ಯಾವುದೇ ಯುದ್ಧ ಸಂಪತ್ತು ತರಲಿಲ್ಲ ಆದ್ದರಿಂದ ಇದು ತುಂಬಾ ಕೆಟ್ಟ ವಿಷಯವಾಗಿದೆ. ನಾವು ಹಿಂದಿರುಗಿ ಮದೀನಾವನ್ನು ಆಕ್ರಮಿಸಬೇಕು ಎಂದು ಭಿನ್ನಭಿಪ್ರಾಯ ಉದ್ಭವಿಸಿ ತಮ್ಮತಮ್ಮಲ್ಲೇ ವಾದಿಸಲು ಪ್ರಾರಂಭಿಸಿದರು. ಆದಾಗ್ಯೂ, ಅದೇ ಸೈನ್ಯದ ಇನ್ನೊಬ್ಬ ನಾಯಕ ಸಫ್ವಾನ್ ಬಿನ್ ಉಮಯ್ಯ, ಇದನ್ನು ಮಾಡಬೇಡಿ ಎಂದು ಸಲಹೆ ನೀಡಿದನು. ಈ ಸಮಯದಲ್ಲಿ, ನಾವು ಮದೀನಾವನ್ನು ಆಕ್ರಮಿಸುವ ಬಗ್ಗೆ ಯೋಚಿಸಬಾರದು, ಇಲ್ಲದಿದ್ದರೆ ನಾವು ಹೀನಾಯವಾಗಿ ಸೋಲುತ್ತೇವೆ, ಆದರೆ ಅಬು ಸುಫ್ಯಾನ್ ಮತ್ತು ಅವನ ಇತರ ಸಹಚರರು ನಾವು ಮದೀನಾವನ್ನು ಆಕ್ರಮಣ ಮಾಡಬೇಕು, ಇಲ್ಲದಿದ್ದರೆ ಮಕ್ಕಾವನ್ನು ಕಳೆದುಕೊಳ್ಳುತ್ತೇವೆ ಎಂದು ನಿರ್ಧರಿಸಿದರು. ಅಷ್ಟರಲ್ಲಿ ಹಝ್ರತ್ ಬಿಲಾಲ್(ರ) ಫಜ್ರ್ ನಮಾಝ್‌ಗಾಗಿ ಅಧ಼ಾನ್ (ಪ್ರಾರ್ಥನೆಗೆ ಕರೆ) ನೀಡಿ ಹಝ್ರತ್ ಪೈಗಂಬರ್(ಸ) ರವರು ಹೊರಗೆ ಬರುವುದನ್ನೇ ಕಾದು ಕುಳಿತರು ಎಂಬ ಸಮಾಲೋಚನೆ ಅಬುಸುಫ್ಯಾನ್ ನ ಸೇನೆಯಲ್ಲಿ ನಡೆಯುತ್ತಿತ್ತು. ಅಷ್ಟರಲ್ಲಿ ಹಝ್ರತ್ ಅಬ್ದುಲ್ಲಾ ಬಿನ್ ಅಮ್ರೋ ಬಿನ್ ಔಫ್ ಮುಝಾನಿ(ರ) ಹಝ್ರತ್ ಪೈಗಂಬರ್(ಸ) ಅವರನ್ನು ಹುಡುಕಿಕೊಂಡು ಬಂದರು. ಅವರು(ಸ) ಹೊರಗೆ ಬಂದಾಗ, ಅವರು ಎದ್ದುನಿಂತು, ಹಝ್ರತ್ ಪೈಗಂಬರ್(ಸ) ಅವರಿಗೆ ಹೇಳೀದರು: ಅವರು ತನ್ನ ಕುಟುಂಬದ ಬಳಿಗೆ ಬರುತ್ತಿರುವಾಗ ದಾರಿಯಲ್ಲಿ ಅಬುಸುಫ್ಯಾನ್‌ನ ಸೈನ್ಯದ ಬಳಿ ಹಾದು ಹೋಗುತ್ತಿರುವಾಗ ಅವರ (ಅಬೂಸುಫ್ಯಾನ್‌ನ) ಜನರು ನೀವು ಏನು ಮಾಡಿಲ್ಲ, ಅವರಿಗೆ ಯಾವ ಹಾನಿವುಂಟು ಮಾಡಲಿಲ್ಲ ಅಂದರೆ ಮುಸ್ಲಿಮರಿಗೆ ಹಾನಿ ಮಾಡಲಿಲ್ಲ ಮತ್ತು ತೊಂದರೆ ನೀಡಲಿಲ್ಲ ಮತ್ತು ನೀವು ಅವರನ್ನು ಬಿಟ್ಟುಬಂದಿದ್ದೀರ ಅವರನ್ನು ನಾಶ ಮಾಡಲಿಲ್ಲ ಎಂದು ಹೇಳುತ್ತಿರುವುದಾಗಿ ಕೇಳಿದರು. ಅವಿಶ್ವಾಸಿಗಳು ಹೇಳಿದರು: ಈ ಮುಸ್ಲಿಮರಲ್ಲಿ ಅನೇಕ ಮಹಾನ್ ವ್ಯಕ್ತಿಗಳು ನಿಮ್ಮೊಂದಿಗೆ ಹೋರಾಡಲು ಒಟ್ಟುಗೂಡುತ್ತಾರೆ, ಆದ್ದರಿಂದ ನಾವು ಹಿಂದಿರುಗಿ ಅವರಲ್ಲಿ ಉಳಿದಿರುವವರನ್ನು ಬೇರುಸಹಿತ ಕಿತ್ತೊಗೆಯೋಣ. ಅದಕ್ಕೆ ಸಫ್ವಾನ್ ಬಿನ್ ಉಮಯ್ಯ ಅವರನ್ನು ತಡೆದು ಹೇಳಿದರು: ಓ ನನ್ನ ಜನರೇ! ಇದನ್ನು ಮಾಡಬೇಡಿ ಏಕೆಂದರೆ ಆ ಜನರು ಈಗಾಗಲೇ ಹೋರಾಡಿದ್ದಾರೆ ಮತ್ತು ಹೋರಾಡಲು ಬರದಿದ್ದವರು ಈಗ ನಿಮ್ಮ ವಿರುದ್ಧ ಅವರೊಂದಿಗೆ ಸೇರುತ್ತಾರೆ ಎಂದು ನಾನು ಭಯಭೀತನಾಗುತ್ತೇನೆ. ನೀವೆಲ್ಲರು ಹಿಂದಿರುಗಿ ಹೋಗಿ ಏಕೆಂದರೆ ಗೆಲುವು ನಿಮ್ಮದೇ ಆಗಿದೆ, ನೀವು ಪುನಃ ಹಿಂತಿರುಗಿದರೆ ನೀವು ಸೋಲುತ್ತೀರಿ ಎಂದು ನಾನು ಭಯಭೀತನಾಗುತ್ತೇನೆ.

ಇದನ್ನೆಲ್ಲ ಕೇಳಿದ ಹಝ್ರತ್ ಪೈಗಂಬರ್(ಸ) ಅವರು ಸಫ್ವಾನ್ ಅಷ್ಟೊಂದು ಬುದ್ಧಿವಂತನಲ್ಲ, ಆದರೆ ಅವನ ಮಾತುಗಳು ತುಂಬಾ ಬುದ್ಧಿವಂತವಾಗಿವೆ, ಅಂದರೆ ಅಬು ಸುಫ್ಯಾನ್ ಮದೀನದ ಮೇಲೆ ದಾಳಿ ಮಾಡದಂತೆ ತಡೆಯಲು ಹೇಳಿದನು. ಆದರೆ ಅದೇ ಸಮಯದಲ್ಲಿ, ಹಝ್ರತ್ ಪೈಗಂಬರ್(ಸ) ಬಹಳ ವೈಭವದಿಂದ ಹೇಳಿದರು:

ಅಲ್ಲಾಹನ ಆಣೆ! ಯಾರ ವಶದಲ್ಲಿ ನನ್ನ ಪ್ರಾಣವಿದೆಯೋ, ಅವರು ಮದೀನದ ಮೇಲೆ ದಾಳಿ ಮಾಡಿದರೆ, ಅವರಿಗಾಗಿ ಕಲ್ಲುಗಳನ್ನು ಗುರುತಿಸಲಾಗಿದೆ, ಅವರ ಹೆಸರು ಮತ್ತು ಗುರುತು ಹಿಂದಿನಂತೆ ಮಳೆಯಿಂದ ಅಳಿಸಿಹೋಗುತ್ತದೆ. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್(ಸ), ಸಂಪುಟ–7, ಪುಟ 63, 120, ಬಝ್ಮ್ ಇಕ್ಬಾಲ್, ಲಾಹೋರ್) (ಸಬ್ಲುಲ್ ಹುದಾ ವರ್ರಶ್ಶಾದ್ ಅನುವಾದಕ, ಸಂಪುಟ–4, ಪುಟ–267–268, ಮಕ್ತಬ ರಹ್ಮಾನಿಯಾ ಲಾಹೋರ್)

ಆದಾಗ್ಯೂ, ಇದರ ವಿಶದ ವಿವರಣೆ ಮುಂದುವರೆಯುವುದು ಇನ್‌ಶಾಅಲ್ಲಾಹ್. ಮತ್ತೊಂದು ಸಂಗತಿ, ಸಾಮಾನ್ಯವಾಗಿ ನಾನು ದುಆಗಾಗಿ ಮನವಿ ಮಾಡುತ್ತಾ ಇರುತ್ತೇನೆ. ದುಆಗಳನ್ನು ಮುಂದುವರೆಸಿರಿ.

ಶಂಕಿಸಲಾದಂತೆ ಇರಾನಿನ ಮೇಲೆ ಇಸ್ರೇಲ್ ದಾಳಿ ನಡೆಸಿದೆ. ಇದು ಎಲ್ಲರಿಗೂ ಗೊತ್ತಿದೆ. ಇದರಿಂದ ಸ್ಥಿತಿಗತಿಗಳು ಇನ್ನಷ್ಟು ಹದಗೆಡುತ್ತಿವೆ.

ಜಾಗತಿಕ ಯುದ್ಧಕ್ಕೆ ಎಣ್ಣೆ ಸುರಿಸಲು ಇನ್ನಷ್ಟು ಪ್ರಯತ್ನಿಸುತ್ತಿರುವ ಈ ಲೌಕಿಕ ನಾಯಕರಿಗೆ ಅಲ್ಲಾಹನು ಬುದ್ಧಿ ನೀಡಲಿ. ಮುಸ್ಲಿಂ ಸಮುದಾಯಕ್ಕೂ ಅಲ್ಲಾಹನು ಬುದ್ಧಿ ಮತ್ತು ವಿವೇಕ ನೀಡಲಿ. ಅವರು ಒಂದಾಗಿ ಎದುರಾಳಿಯನ್ನು ಸರಿಯಾಗಿ ಎದುರಿಸಲು ಮತ್ತು ವಿವೇಕಯುತವಾಗಿ ವರ್ತಿಸಲು ಅಲ್ಲಾಹನು ಅವರಿಗೆ ಸೌಭಾಗ್ಯ ನೀಡಲಿ.

ಈಗ ನಾನು ಎರಡು ದಿವಂಗತರ ಬಗ್ಗೆ ಉಲ್ಲೇಖಿಸಲು ಬಯಸುತ್ತೇನೆ, ಅದರಲ್ಲಿ ಮೊದಲನೆಯವರು ಮೌಲಾನಾ ಗುಲಾಮ್ ಅಹ್ಮದ್ ಸಾಹಿಬ್ ನಸೀಮ್ ಅವರದ್ದಾಗಿದೆ. ಇವರು ಜಮಾಅತ್ತಿನ ಮುರಬ್ಬಿಯಾಗಿದ್ದರು. ಅವರು ಜಾಮಿಯಾ ಅಹ್ಮದಿಯಾ ರಬ್ವಾದಲ್ಲಿ ಪ್ರಾಧ್ಯಾಪಕರಾಗಿದ್ದರು. ಅವರು ಇಂದು ಅಮೆರಿಕದಲ್ಲಿದ್ದರು. ಇತ್ತೀಚಿನ ದಿನಗಳಲ್ಲಿ 93ನೇ ವಯಸ್ಸಿನಲ್ಲಿ ನಿಧನ ಹೊಂದಿದ್ದಾರೆ **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**.

ಅವರ ತಂದೆಯ ಹೆಸರು ಸಲಾಹ್ ಮುಹಮ್ಮದ್ ಸಾಹಿಬ್, ಅವರು ಕುಸೂಫ್, ಖುಸೂಫ್ (ಸೂರ್ಯ ಮತ್ತು ಚಂದ್ರ ಗ್ರಹಣದ) ಗ್ರಹಣದ ಚಿಹ್ನೆಯನ್ನು ನೋಡಿದ ನಂತರ ಮಹದಿಯನ್ನು ಹುಡುಕಲು ಪ್ರಾರಂಭಿಸಿದರು. ಮತ್ತು ಹಲವು ವರ್ಷಗಳು ಕಳೆದ ನಂತರ 1901 ರಲ್ಲಿ ಅವರು ಬೈಅತ್ ಮಾಡುವ ಸೌಭಾಗ್ಯ ಪಡೆದರು. ದೂರದ ಪ್ರದೇಶವಾದ್ದರಿಂದ ಖಾದಿಯಾನ್‌ಗೆ ತೆರಳಲು ಸಾಧ್ಯವಾಗಲಿಲ್ಲ. ಮೀರ್ ಸಲಾಹ್ ಮುಹಮ್ಮದ್ ಸಾಹಿಬ್ ಅವರು ಅಲ್ಲಾಹನ ಅನುಗ್ರಹದಿಸಂದ ಮೂಸಿ ಆಗಿದ್ದರು ಮತ್ತು ಅವರು ಅಹ್ಮದಿಯತ್ ಅನ್ನು ಸ್ವೀಕರಿಸಿದ ಕಾರಣ ತೀವ್ರ ವಿರೋಧವನ್ನು ಎದುರಿಸಿದರು. ತಮ್ಮ ಗ್ರಾಮದಲ್ಲಿದ್ದ ಇದು ಏಕೈಕ ಅಹ್ಮದಿ ಮನೆಯಾಗಿತ್ತು. ಮೀರ್ ಗುಲಾಮ್ ಅಹ್ಮದ್ ನಸೀಮ್ ಸಾಹಿಬ್ ಅವರು ತಮ್ಮ ಅಧ್ಯಯನದ ಸಮಯದಲ್ಲಿ 1947 ರಲ್ಲಿ ವಖ್ಫೆ ಝಿಂದಗಿಯ ಪತ್ರವನ್ನು ಬರೆದರು, ನಂತರ ಅವರ ವಖ್ಫ್ ಅನ್ನು ಅನುಮೋದಿಸಲಾಯಿತು ಮತ್ತು ನಂತರ ಅವರ ಅಧ್ಯಯನವನ್ನು ಮುಂದುವರಿಸಲು ಸೂಚಿಸಲಾಯಿತು. ವಿಭಜನೆಯ ನಂತರ, 1948 ರಲ್ಲಿ, ಅವರು ಮದ್ರಸಾ ಅಹ್ಮದಿಯಾ ಅಹ್ಮದ್ನಗರದಲ್ಲಿ ಅಧ್ಯಯನ ಮಾಡಲು ಪ್ರಾರಂಭಿಸಿದರು. 1954 ರಲ್ಲಿ ಮೌಲ್ವಿ ಫಾಜಿಲ್‌ನಲ್ಲಿ ಉತ್ತೀರ್ಣರಾದರು ಮತ್ತು ನಂತರ ಜಾಮಿಯತುಲ್–ಮುಬಶರಿನ್‌ನಿಂದ

**"ಉಪವಾಸ ಮಾಡಿರಿ, ಆರೋಗ್ಯ ಪಡೆಯಿರಿ."**
**"ಜನರಿಗೆ ಕೃತಜ್ಞತೆ ಸಲ್ಲಿಸದವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸಲಾರನು."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪವಿತ್ರ ಖುರ್‌ಆನ್ ವಜ್ರವೈಢೂರ್ಯಗಳ ಒಂದು ನಿಧಿಯಾಗಿದೆ. ಆದರೆ ಜನರು ಅದನ್ನು ಅರಿತಿಲ್ಲ.**
(ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2023-25 Vol No.05, Thursday, 23 May 2024, Issue No. 21

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

ಶಾಹಿದ್ ಪದವಿ ಪಡೆದರು. 1957 ರಲ್ಲಿ ಕಾರ್ಯರೂಪಕ್ಕೆ ಬಂದರು. 1960 ರಲ್ಲಿ, ಅವರು ಸೆರಾ ಲಿಯೋನ್‌ಗೆ ಆಗಮಿಸಿದರು, ಅಲ್ಲಿ ಅವರು ಮೂರು ವರ್ಷಗಳ ಕಾಲ ಬೋಧಕರಾಗಿ ಸೇವೆ ಸಲ್ಲಿಸಿದರು ಮತ್ತು ಅಹ್ಮದಿಯಾ ಶಾಲೆ ಬೋ ವಿನ ಮುಖ್ಯೋಪಾಧ್ಯಾಯರಾದರು. ಪಾಕಿಸ್ತಾನಕ್ಕೆ ಹಿಂದಿರುಗಿದ ನಂತರ, ಅವರನ್ನು ಜಾಮಿಯಾ ಅಹ್ಮದಿಯಾಗೆ ನೇಮಿಸಲಾಯಿತು. ಇಲ್ಲಿನ ಗ್ರಂಥಾಲಯದಲ್ಲಿ ಮಹಾತ್ಮರ ಕರ್ತವ್ಯವನ್ನೂ ನಿರ್ವಹಿಸಿದ್ದಾರೆ. ಒಬ್ಬ ಶಿಕ್ಷಕರು ರಜೆಯಲ್ಲಿದ್ದರೆ ಅವರೂ ಪಿರಿಯಡ್ ತೆಗೆದುಕೊಳ್ಳುತ್ತಿದ್ದರು. ಏತನ್ಮಧ್ಯೆ, ನೀವು ಪಂಜಾಬ್ ವಿಶ್ವವಿದ್ಯಾಲಯದಿಂದ ಎಂಎ ಅರೇಬಿಕ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. 1966 ರಲ್ಲಿ, ಅವರು ಗಯಾನಾಗೆ ನೇಮಕಗೊಂಡರು. ಇಲ್ಲಿ ನಾಲ್ಕು ವರ್ಷ ಸೇವೆ ಸಲ್ಲಿಸಿದರು. ಅವರು 1970 ರಲ್ಲಿ ಕೇಂದ್ರಕ್ಕೆ ಮರಳಿದರು. 1970 ರಿಂದ 1975 ರವರೆಗೆ ಜಾಮಿಯಾ ಅಹ್ಮದಿಯಾದಲ್ಲಿ ವಿಶೇಷವಾಗಿ ವಿದೇಶಿ ವಿದ್ಯಾರ್ಥಿಗಳಿಗೆ ಕಲಿಸಲು ಶಿಕ್ಷಕರಾಗಿ ನೇಮಕಗೊಂಡರು. 75 ರಿಂದ 79 ರವರೆಗೆ, ಅವರು ನಾಲ್ಕು ವರ್ಷಗಳ ಕಾಲ ಆಫ್ರಿಕಾದ ಜಾಂಬಿಯಾದಲ್ಲಿ ಪ್ರಚಾರಕರಾಗಿ ಸೇವೆ ಸಲ್ಲಿಸಿದರು. ನಂತರ, 1980 ರಿಂದ 1997 ರವರೆಗೆ, ಅವರು ಜಾಮಿಯಾ ಅಹ್ಮದಿಯಾದಲ್ಲಿ ಇತಿಹಾಸ ಮತ್ತು ಸೂಫಿಸಂನ ಶಿಕ್ಷಕರಾಗಿ ಸೇವೆ ಸಲ್ಲಿಸಿದರು.

ಅವರು 11 ವರ್ಷಗಳ ಕಾಲ ಸೆರಾ ಲಿಯೋನ್, ಗಯಾನಾ ಮತ್ತು ಜಾಂಬಿಯಾದಲ್ಲಿ ಸೇವೆ ಸಲ್ಲಿಸಿದರು ಮತ್ತು ಅವರ ಕುಟುಂಬವಿಲ್ಲದೆ ಇಡೀ ಅವಧಿಯನ್ನು ವಿದೇಶದಲ್ಲಿ ಕಳೆದರು ಎಂದು ಅವರ ದಾಖಲೆಗಳು ಹೇಳುತ್ತವೆ. ಅವರ ಪತ್ನಿ ಮತ್ತು ಅವರ ತ್ಯಾಗವನ್ನು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್) ಅವರು ಭಾಷಣದಲ್ಲಿ ಉಲ್ಲೇಖಿಸಿದ್ದಾರೆ.

ಅವರ ಪತ್ನಿ ಅಮತುಲ್ ಮನ್ನನ್ ಖಮರ್ ಸಾಹಿಬಾ ಫಝ್ಲ್ ಉಮರ್ ರಬ್ವಾಹ್ ಬಾಲಕಿಯರ ಶಾಲೆಯ ಮಾಜಿ ಮುಖ್ಯೋಪಾಧ್ಯಾಯಿನಿಯಾಗಿದ್ದರು. ಅಲ್ಲಾಹನು ಅವರಿಗೆ ಸೇವೆಯಲ್ಲಿ ಮುನ್ನಡೆಸುತ್ತಿರುವ ನಾಲ್ಕು ಪುತ್ರಿಯರನ್ನು ಅನುಗ್ರಹಿಸಿದ್ದಾನೆ ಮತ್ತು ಅವರೆಲ್ಲರೂ ಉತ್ತಮ ಶಿಕ್ಷಣ ಪಡೆದಿದ್ದಾರೆ.

ಅವರಿಗೆ ಡಾ. ಅಮತುಲ್ ಶುಕೂರ್ ಸಾಹಿಬಾ ಎಂಬ ಮಗಳಿದ್ದಾಳೆ, ಅವಳು ಡಾ. ಅಬ್ದುಲ್ ಹಫೀಝ್ ಸಆಹಿಬ್ ಅವರ ಪತ್ನಿಯಾಗಿದ್ದಾರೆ. ಇವರು ಅಮೆರಿಕದಲ್ಲಿದ್ದಾರೆ. ಅವರು ಹನ್ನೊಂದು ವರ್ಷಗಳ ಕಾಲ ಗ್ಯಾಂಬಿಯಾ ಮತ್ತು ತಾಂಜಾನಿಯಾದಲ್ಲಿ ನುಸ್ರತ್ ಜಹಾನ್ ಯೋಜನೆಯಡಿಯಲ್ಲಿ ಸೇವೆ ಸಲ್ಲಿಸಿದರು.

ಅವರ ಶೈಕ್ಷಣಿಕ ಕಾರ್ಯಗಳೂ ಇವೇ. ಅವರು ಮೂರು ಪುಸ್ತಕಗಳ ಲೇಖಕರಾಗಿದ್ದರು. ಖಾಮೂಸ್ ಅಲ್-ರೊಯಾ, (ಕನಸುಗಳ ವ್ಯಾಖ್ಯಾನ. ಅಕ್ಷರಗಳ ಪ್ರಕಾರ) ಸೂಫಿಸಂ. ಆಧ್ಯಾತ್ಮಿಕ ವಿಜ್ಞಾನ, ಇದು ಅವರ ಎರಡನೇ ಪುಸ್ತಕ ಮತ್ತು ಮೂರನೇ ಪುಸ್ತಕ ಯಾದೆ ವಯ್ಯಾಮ್, ಅವರ ಆತ್ಮಚರಿತ್ರೆಯ ಸನ್ನಿವೇಶಗಳು.

ಆಸ್ಟ್ರೇಲಿಯಾದ ಇನಾಮ್-ಉಲ್-ಹಕ್ ಕೌಸರ್ ಮಿಷನರಿ-ಇನ್-ಚಾರ್ಜ್ ಬರೆಯುತ್ತಾರೆ: ಅವರು ಉತ್ತಮ ಶಿಕ್ಷಕರಾಗಿದ್ದರು ಮತ್ತು ವಿದ್ಯಾರ್ಥಿಗಳನ್ನು ಸಹನೆ ಮತ್ತು ನಮ್ರತೆಯಿಂದ ನೋಡಿಕೊಳ್ಳುತ್ತಿದ್ದರು. ನಾನು ಬ್ರಿಟಿಷ್ ಗಯಾನಾ ಪ್ರವಾಸಕ್ಕೆ ಹೋದಾಗ, ಮೂರ್ನಾಲ್ಕು ಹಳ್ಳಿಗಳಲ್ಲಿ, ಅವರು ಸ್ಥಾಪಿಸಿದ ಜಮಾಅತ್‌ಗಳಲ್ಲಿ, ಹಳೆಯ ಜನರೆಲ್ಲರೂ ಅವರನ್ನು ಬಹಳ ಒಳ್ಳೆಯ ರೀತಿಯಲ್ಲಿ ಉಲ್ಲೇಖಿಸಿ ಅವರ ಚಿತ್ರವನ್ನು ತಮ್ಮೊಂದಿಗೆ ಇಟ್ಟುಕೊಂಡಿದ್ದಾರೆ ಎಂದು ಹೇಳಲಾಗುತ್ತದೆ. ಅಲ್ಲಾಹನು ಅವರ ಮೂಲಕ ಬ್ರಿಟಿಷ್ ಗಯಾನಾದಲ್ಲಿ ಒಂದು ದೃಢವಾದ ಜಮಾಅತ್ ಅನ್ನು ಸ್ಥಾಪಿಸಿದನು.

(ಮುಂದುವರಿಯುವುದು)

***ವಿಶೇಶ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9866358609 (ವ್ಯವಸ್ಥಾಪಕರು)

**Love for All, Hatred for None**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅವಲೋಕಿಸಿದರೆ ದೇವರು ಒಬ್ಬನೇ ಎಂಬುದನ್ನೂ ಸೂಚಿಸುತ್ತದೆ.

**ಇಮ್ಮಿನ್ ಶೈಯಿನ್ ಇಲ್ಲಾ ಯುಸಬ್ಬಿಹು ಬಿಹಮ್‌ದಿಹೀ** ನಲ್ಲಿ ಆತನನ್ನು ವೈಯುಕ್ತಿಕವಾಗಿ ತಸ್ಬೀಹ್ ಮಾಡುವ ಬಗ್ಗೆ ಪ್ರಸ್ತಾಪವಿದ್ದು, ಮೊದಲ ವಾಕ್ಯದಲ್ಲಿ ಸಂಪೂರ್ಣವಾಗಿ ತೌಹೀದ್ ವ್ಯಕ್ತಪಡಿಸುವ ಕಡೆ ಸೂಚನೆಯಿದೆ. ಇಲ್ಲದಿದ್ದರೆ, **ಯುಸಬ್ಬಿಹು ಲಹೂಸ್ಸಮಾವಾತುಸ್ಸಬ್‌ಉ ವಲ್‌ಅರ್ಝು ವಮನ್ ಫೀ ಹಿನ್ನ** ನಲ್ಲಿಯೂ ಪ್ರತ್ಯೇಕವಾಗಿ ತೌಹೀದ್ ಅನ್ನು ಉಲ್ಲೇಖಿಸಲು ಉದ್ದೇಶಿಸಿದ್ದರೆ ನಂತರ ಈ ವಾಕ್ಯವು ಬರುತ್ತಿರಲಿಲ್ಲ. ಆದ್ದರಿಂದ ಈ ವಾಕ್ಯದ ಮರು-ವ್ಯಾಖ್ಯಾನವು ಮೊದಲ ವಾಕ್ಯದಲ್ಲಿ ಒಟ್ಟಾರೆಯಾಗಿ ಪ್ರಪಂಚದ ಎಲ್ಲಾ ವಸ್ತುಗಳ ಏಕತೆಯನ್ನು ಸಾಬೀತುಪಡಿಸಲು ತೋರಿಸಲಾಗಿದೆ ಮತ್ತು ಎರಡನೆಯ ವಾಕ್ಯದಲ್ಲಿ ಪ್ರಪಂಚದ ಪ್ರತಿಯೊಂದು ವಿಷಯವೂ ಪ್ರತ್ಯೇಕವಾಗಿ ತೌಹೀದ್‌ಗೆ ಒಂದು ಪುರಾವೆಯಾಗಿದೆ ಎಂದು ಹೇಳಲಾಗಿದೆ. ಪ್ರಪಂಚದ ವಸ್ತುಗಳು ಪರಸ್ಪರ ಹೇಗೆ ಸಂಬಂಧಿಸಿವೆ ಎಂಬುದನ್ನು ನೋಡಿ. ಕೆಲವು ವಸ್ತುಗಳು ಒಂದಕ್ಕೊಂದು ಸಾವಿರಾರು ಮಿಲಿಯನ್ ಮೈಲುಗಳಷ್ಟು ದೂರದಲ್ಲಿವೆ ಆದರೆ ಎಲ್ಲವೂ ಒಂದಕ್ಕೊಂದು ಸಂಬಂಧಿಸಿದಂತೆ ಅಸ್ತಿತ್ವದಲ್ಲಿವೆ ಮತ್ತು ಎಲ್ಲವೂ ವ್ಯವಸ್ಥೆಯಲ್ಲಿ ಸಂಪರ್ಕಗೊಂಡಿವೆ. ಹೀಗೆ ಅವರ ಒಂದೇ ಕಾನೂನಿನೊಂದಿಗೆ ಸಂಬಂಧವು ಜಗತ್ತಿನಲ್ಲಿ ಬೇರೆ ಯಾವುದೇ ಕಾನೂನು ಇಲ್ಲ ಎಂದು ತೋರಿಸುತ್ತದೆ, ಇಲ್ಲದಿದ್ದರೆ ಗೊಂದಲ ಉಂಟಾಗುತ್ತಿತ್ತು ಮತ್ತು ಬೇರೆ ಕಾನೂನು ಇಲ್ಲದಿರುವಾಗ ಮತ್ತೊಂದು ಶಾಸಕಾಂಗದ ಅಸ್ತಿತ್ವವು ಹೇಗೆ ಸಾಧ್ಯ?

ಪ್ರಪಂಚದ ಎಲ್ಲಾ ವಸ್ತುಗಳು ಪ್ರತ್ಯೇಕವಾಗಿ ತಸ್ಬೀಹ್ ಮಾಡುತ್ತಿವೆ, ಎಲ್ಲದರಲ್ಲೂ ದೇವರ ಗುಣಲಕ್ಷಣಗಳ ಪ್ರತಿಬಿಂಬವಿದೆ, ದೇವನ ರಹಸ್ಯವಾಗಿಡುವ ಲಕ್ಷಣ, ಕ್ಷಮಿಸುವ ಲಕ್ಷಣ, ಅವನ ಸೃಷ್ಟಿ, ಅವನ ಆದಿಪತ್ಯ, ಹೀಗೆ ಪ್ರತಿಯೊಂದು ವಿಷಯದಲ್ಲೂ ಎಲ್ಲಾ ಗುಣಲಕ್ಷಣಗಳು ಕಂಡುಬರುತ್ತವೆ. ಅಂದರೆ, ಆ ವಿಷಯವು ಈ ವಿಷಯಗಳ ಮೇಲೆ ಕಾರ್ಯನಿರ್ವಹಿಸುವುದನ್ನು ಕಾಣಬಹುದು. ಪ್ರಪಂಚದ ಯಾವುದೇ ಕಣವನ್ನು ತೆಗೆದುಕೊಂಡರೂ ಈ ಎಲ್ಲಾ ಗುಣಗಳು ಅವನಲ್ಲಿ ಕೆಲಸ ಮಾಡುವುದನ್ನು ಕಾಣಬಹುದು. ಹೀಗಿರುವಾಗ ಎಲ್ಲವೂ ಭಗವಂತನ ಗುಣಲಕ್ಷಣಗಳನ್ನು ಮಾತ್ರ ತೋರಿಸುತ್ತಿರುವಾಗ, ಅದನ್ನು ಬೇರೆ ದೇವರ ಕಡೆಗೆ ಹೇಗೆ ಹೋಲಿಸಬಹುದು?

**ವಲಾಕಿಲ್ಲಾ ತಫ್‌ಖಹೂನ ತಸ್ಬೀಹಹುಮ್** ನಿಂದ ಕೆಲವರು ಅವರು ಅರ್ಥವಾಗದ ಪ್ರತ್ಯೇಕ ಉಪಭಾಷೆಗಳನ್ನು ಹೊಂದಿದ್ದಾರೆ ಎಂದು ಅರ್ಥೈಸಿದ್ದಾರೆ. ಒಂದು ವೇಳೆ ಎಲ್ಲವೂ ಪ್ರತ್ಯೇಕ ಉಪಭಾಷೆಯನ್ನು ಹೊಂದಿದ್ದು ನಮಗೆ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗದಿದ್ದರೆ, ಇದು ನಮಗೆ ಹೇಗೆ ಸಾಕ್ಷಿಯಾಗುತ್ತದೆ. ಸಾಕ್ಷಿ ಎಂಬುದು ನಮಗೆ ಅರ್ಥವಾಗುವ ವಿಷಯವಾಗಿರಬೇಕು. ಆದುದರಿಂದ ಇಲ್ಲಿ **ತಫ್‌ಖಹೂನ** ದಿಂದ ಬೇರೆ ಬೇರೆ ವಸ್ತುಗಳ ಭಾಷೆ ಎಂದು ಅರ್ಥೈಸಿಕೊಳ್ಳುವುದು ಎಂದಲ್ಲ ಬದಲಿಗೆ ಅವರೆಲ್ಲರು ತಸ್ಬೀಹ್ ಮಾಡುತ್ತಿದೆ ಎಂದು ನಿಮಗೆ ಅರ್ಥವಾಗುವುದಿಲ್ಲ **ಇನ್ನಹೂ ಕಾನ ಹಲೀಮನ್ ಘಫೂರ** ಅವನು ಸೌಮ್ಯತೆವುಳ್ಳವನೂ ಮತ್ತು ಕ್ಷಮಾಶೀಲನೂ ಆಗಿದ್ದಾನೆ. ಅವನ ಜ್ಞಾನದ ಕಾರಣದಿಂದ ನೀವು ಉಪಯೋಗ ಪಡೆಯದೆ ದುಷ್ಕೃತ್ಯಗಳಲ್ಲಿ ಬೆಳೆಯುತ್ತಿದ್ದೀರಿ. ಇಂತಹ ವ್ಯವಸ್ಥೆಗಳು ಮತ್ತು ವಾದಗಳ ಉಪಸ್ಥಿತಿಯಲ್ಲಿ ನೀವು ಅವುಗಳ ಲಾಭವನ್ನು ಪಡೆದುಕೊಳ್ಳುತ್ತೀರಿ, ಬದಲಿಗೆ, ಕೆಡುಕುಗಳಲ್ಲಿ ಹೆಚ್ಚಾಗುವುದು ಮತ್ತು ತಕ್ಷಣವೇ ಸಿಕ್ಕಿಹಾಕಿಕೊಳ್ಳದಿರುವುದು ಇದಕ್ಕೆ ಕಾರಣ ಸರ್ವಶಕ್ತನಾದ ಅಲ್ಲಾಹನ ಜ್ಞಾನದ ಕಾರಣದಿಂದಾಗಿದೆ ಎಂದು ನೀವು ಭಾವಿಸುವುದಿಲ್ಲವೇ? ಆದ್ದರಿಂದ ಉದಾತ್ತ ಮನೋಭಾವವನ್ನು ತೋರಿಸಿ ಮತ್ತು ಸರ್ವಶಕ್ತನಾದ ಅಲ್ಲಾಹನ ಈ ಜ್ಞಾನವನ್ನು ಪ್ರಶಂಸಿಸಿರಿ.

**(ತಫ್ಸೀರ್ ಕಬೀರ್, ಸಂಪುಟ-4, ಪುಟ-343, ಮುದ್ರಣ 2010 ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.